# ಪುಂಗವ

ಕನ್ನಡ ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಅಯೋಧ್ಯೆಯ ಶ್ರೀ ರಾಮ ಮಂದಿರದಲ್ಲಿ ನವೆಂಬರ್ 25, 2025ರಂದು ಮಂದಿರ ನಿರ್ಮಾಣ ಪೂರ್ಣಗೊಂಡಿರುವ ಸಂಕೇತವಾಗಿ ದೇವಸ್ಥಾನದ ಗೋಪುರದ ಮೇಲೆ ಧರ್ಮಧ್ವಜವನ್ನು ಸ್ಥಾಪಿಸಲಾಯಿತು.


ಸಂಪುಟ : 47 | ಸಂಚಿಕೆ : 15 | ಮಾರ್ಗಶಿರ–ಪುಷ್ಯ | ಕಲಿಯುಗಾಬ್ದ 5127 | 15–12–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಪರಿಸರಸ್ನೇಹಿ ಜೀವನಶೈಲಿಯ ಮೂಲಕ ಪರಿಸರ ಸಂರಕ್ಷಣೆ ಸಾಧ್ಯ

## ಪ್ರಕೃತಿಯ ಸ್ವರೂಪ

ನಮ್ಮ ಸುತ್ತಮುತ್ತಲಿನ ಪ್ರಕೃತಿಯು ಭೂಮಿ, ಆಕಾಶ, ಗಾಳಿ, ಬೆಂಕಿ ಮತ್ತು ನೀರು ಎಂಬ ಪಂಚಭೂತಗಳಿಂದ ನಿರ್ಮಿತವಾಗಿದೆ. ಭೂಮಿಯಿಂದ ಗಂಧ(ವಾಸನೆ), ಆಕಾಶದಿಂದ ಶಬ್ದ, ಗಾಳಿಯಿಂದ ಸ್ಪರ್ಶ, ನೀರಿನಿಂದ ರುಚಿ ಹಾಗೂ ಬೆಂಕಿಯಿಂದ ರೂಪ (ದೃಶ್ಯ) ವು ಉಂಟಾಗಿದೆ.  ಮಹರ್ಷಿ ಚರಕರು ತಮ್ಮ ಸಂಹಿತೆಯಲ್ಲಿ ಈ ಪಂಚಭೂತಗಳ ಜೊತೆಗೆ ಮತ್ತೊಂದು ತತ್ತ್ವವನ್ನು ಸೇರಿಸಿ, ಆರು ತತ್ತ್ವಗಳಿಂದ ಈ ಭೂಮಿಯ ನಿರ್ಮಾಣವಾಗಿದೆ ಎಂದು ವಿವರಿಸಿದ್ದಾರೆ.

ಆದ್ದರಿಂದ ಮನುಷ್ಯನು ತೀರಿಕೊಂಡು ಅವನ ಅಂತ್ಯಕ್ರಿಯೆ ನಡೆದಾಗ 'ದೇಹವು ಪಂಚಭೂತಗಳಲ್ಲಿ ವಿಲೀನವಾಯಿತು' ಎಂದು ಹೇಳುತ್ತೇವೆ. ಈ ವಿಲೀನತೆ ಹಲವು ರೀತಿಯಲ್ಲಿ ನಡೆಯುತ್ತದೆ. ಮಣ್ಣಿನಲ್ಲಿ ಹೂಳುವ ಮೂಲಕ, ಜಲ ಸಮಾಧಿಯ ಮೂಲಕ, ಬೆಂಕಿಯಲ್ಲಿ ಸುಡುವ ಅಥವಾ ಗಾಳಿಯಲ್ಲಿ ಕರಗುವ ಮೂಲಕ ನಡೆಯುತ್ತದೆ. ಇಲ್ಲಿ ಆರನೇ ತತ್ತ್ವವು ಆತ್ಮ ಅಥವಾ ಭಗವಂತ. ಭಗವಂತನೆಂಬ ಈ ಚೇತನದಿಂದಾಗಿಯೇ ಪಂಚಭೂತಗಳ ಮೂಲಕ ಪ್ರಕೃತಿ ಅಥವಾ ಮನುಷ್ಯನ ಸೃಷ್ಟಿಯಾಯಿತು.  ಭಗವಂತನೆಂಬ ಈ ಚೈತನ್ಯ ಶಕ್ತಿಯೇ ಇವೆಲ್ಲವನ್ನೂ ಸಚೇತನ ಮತ್ತು ಕ್ರಿಯಾಶೀಲಗೊಳಿಸುತ್ತದೆ. ಮತ್ತು ಆತ್ಮರಹಿತವಾಗುತ್ತಿದ್ದಂತೆ, ಈ ಪಂಚತತ್ತ್ವಗಳು ನಿರ್ಜೀವವಾಗುತ್ತವೆ. ಈ ಪಂಚಭೂತಗಳ ವಿಶಿಷ್ಟ ಸಮತೋಲನದಿಂದಲೇ ಎಲ್ಲಾ ಚಟುವಟಿಕೆಗಳು ಸುಗಮವಾಗಿ ನಡೆಯುತ್ತಿರುತ್ತವೆ. ಈ ಸಮತೋಲನಕ್ಕೆ ಯಾವುದೇ ರೀತಿಯ ತೊಂದರೆ ಬಾರದಂತೆ ಕಾಪಾಡುವುದು ಮನುಷ್ಯನ ಕರ್ತವ್ಯವಾಗಿದೆ ಎಂದು ಆಚಾರ್ಯ ಚರಕರು ಹೇಳುತ್ತಾರೆ.

## ಮಾಲಿನ್ಯ ಮತ್ತು ವೃಕ್ಷಾರೋಹಣ

ಮೇಲೆ ತಿಳಿಸಿದಂತಹ ಅಸಮತೋಲನವೇ ಇಂದಿನ ಅತಿದೊಡ್ಡ ಜಾಗತಿಕ ಸಮಸ್ಯೆಯಾಗಿದೆ. ಮಾಲಿನ್ಯ ಎಂದರೇನು? ಜಲ ಮಾಲಿನ್ಯ, ವಾಯು ಮಾಲಿನ್ಯ, ಭೂ ಮಾಲಿನ್ಯ ಇಂತಹ ಅನೇಕ ಮಾಲಿನ್ಯಗಳು ಇಂದು ಜಾಗತಿಕ ಚರ್ಚೆಯ ವಿಷಯಗಳಾಗಿವೆ. ಭಾರತೀಯ ಸಂಸ್ಕೃತಿಯಲ್ಲಿ 'ಮಾಲಿನ್ಯ' ಎಂಬ ಪದವೇ ಇರಲಿಲ್ಲ ಎಂಬುದು ಗಮನಾರ್ಹ ಅಂಶ. ಈ ಪದವನ್ನು ನಂತರ ಬಳಕೆಗೆ ತರಲಾಯಿತು. ಮಿಥ್ಯಾಯೋಗ ಅಥವಾ ದುರುಪಯೋಗದಿಂದ ಉಂಟಾಗುವ ಪರಿಣಾಮಗಳ ಕುರಿತು ಚರಕ ಸಂಹಿತೆಯಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ. ಪೃಥ್ವಿ ಸೂಕ್ತದಲ್ಲಿ ನಮ್ಮ ಭೂಮಿಗೆ ವಸುಂಧರಾ, ಅವನಿ, ಪರಿಪಾಲಕ, ಪೋಷಕ, ಗೌರಿ, ಅನಂತಾ, ಪೃಥ್ವಿ ಮುಂತಾದ 70ಕ್ಕೂ ಹೆಚ್ಚು ಹೆಸರುಗಳನ್ನು ನೀಡಲಾಗಿದೆ. ನಮ್ಮ ಸಂಸ್ಕೃತಿಯಲ್ಲಿ ಭೂಮಿಯನ್ನು ತಾಯಿ ಎಂದು ಸಂಬೋಧಿಸಲಾಗುತ್ತದೆ.

"ಮಾತಾ ಭೂಮಿಃ ಪುತ್ರೋಽಹಂ ಪೃಥಿವ್ಯಾಃ" (ಭೂಮಿಯು ತಾಯಿ, ನಾನು ಪೃಥ್ವಿಯ ಮಗ) ಅಥರ್ವವೇದದ ಭೂಮಿ ಸೂಕ್ತ.

ನಾವು ಭೂಮಿಯನ್ನು ತಾಯಿ ಎಂದು ಮತ್ತು ನಮ್ಮನ್ನು ಅದರ ಮಕ್ಕಳೆಂದು ಕರೆದಿದ್ದೇವೆ. ನಮ್ಮ ಪೂರ್ವಜರು ಸೃಷ್ಟಿಯನ್ನು ತಮ್ಮನ್ನು ಪಾಲಿಸುವ ಅಂಶವೆಂದು ಭಾವಿಸಿದ್ದರು. ಇದನ್ನೇ ಆಧಾರವಾಗಿಟ್ಟುಕೊಂಡು ತಮ್ಮ ನಾಗರಿಕತೆಯನ್ನು ಕಟ್ಟಿದರು. ನಾವು ಯಾವಾಗಲೂ ಪ್ರಕೃತಿ ಮತ್ತು ಪುರುಷರ ನಡುವೆ ಸಮತೋಲನವನ್ನು ಕಾಪಾಡಲು ಪ್ರಯತ್ನಿಸಿದೆವು ಮತ್ತು ನಮ್ಮ ಜೀವನಶೈಲಿ ಹಾಗೂ ಸಂಸ್ಕೃತಿಯ ವಿಕಾಸವು ಈ ಮೂಲಮಂತ್ರವನ್ನು ಗಮನದಲ್ಲಿಟ್ಟುಕೊಂಡೇ ನಡೆಯಿತು.

ಸಂಯಮಿತ ಜೀವನಶೈಲಿ ಎಂದರೇನು? ಬದುಕಿ ಮತ್ತು ಬದುಕಲು ಬಿಡಿ, ಸಾವಿರಾರು ಲಕ್ಷಾಂತರ ವರ್ಷಗಳಿಂದ ವಿವಿಧ ಪ್ರಾಣಿಗಳು ಈ ಭೂಮಿಯ ಮೇಲೆ ವಾಸಿಸುತ್ತಿವೆ, ಆದರೆ ಅವು ಪ್ರಕೃತಿಗೆ ಯಾವುದೇ ಅನ್ಯಾಯವನ್ನು ಮಾಡಿಲ್ಲ. ಆದರೆ, ಮನುಷ್ಯರು ಮಾತ್ರ ತಮ್ಮ ನಾಗರಿಕತೆಯ ಅಭಿವೃದ್ಧಿಗೆ ಪ್ರಕೃತಿಯನ್ನು ಶೋಷಿಸುತ್ತಿದ್ದಾರೆ.

## ವಿವಿಧ ರೀತಿಯ ಮಾಲಿನ್ಯಗಳು

ತಾಂತ್ರಿಕ ಕ್ರಾಂತಿಯ ಈ ಯುಗದಲ್ಲಿ, ಇ–ತ್ಯಾಜ್ಯದ (ಎಲೆಕ್ಟ್ರಾನಿಕ್ ತ್ಯಾಜ್ಯ) ಪ್ರಮಾಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ನಮ್ಮನ್ನು ನಾವು ವಿಶ್ಲೇಷಿಸಿಕೊಂಡರೆ, ನಾವು ಎಷ್ಟು ಸಿಡಿಗಳನ್ನು, ಎಷ್ಟು ಚಾರ್ಜರ್‌ಗಳನ್ನು ಬಳಸಿದ ನಂತರ ಬಿಸಾಡಿದ್ದೇವೆ ಎಂಬುದು ನಮಗೆ ತಿಳಿಯುತ್ತದೆ. ರೈಲು ಪ್ರಯಾಣದಲ್ಲಿ ಹಳಿಗಳ ಎರಡೂ ಬದಿಯಲ್ಲಿ ನೋಡಿದರೆ, ಖಾಲಿ ಬಾಟಲಿಗಳ ರಾಶಿಗಳು ಕಾಣಿಸುತ್ತವೆ. ಈ ರಾಶಿಗಳು ಎಲ್ಲಿಂದ ಬಂದವು? ಅವು ಪ್ರಕೃತಿಯಿಂದ ಬಂದವೇ? ಪ್ಲಾಸ್ಟಿಕ್ ಮಣ್ಣಿನಲ್ಲಿ ಕರಗಲು ನೂರಾರು ವರ್ಷಗಳಿಗಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ ಎಂಬುದು ನಮಗೆಲ್ಲ ತಿಳಿದಿದೆ. ಆದ್ದರಿಂದ, ಪ್ಲಾಸ್ಟಿಕ್ ಇಂದಿನ ಯುಗದ ಅತಿ ದೊಡ್ಡ ಸಮಸ್ಯೆಯಾಗಿದೆ ಮತ್ತು ಇದರಿಂದ ಉದ್ಭವಿಸುವ ಸವಾಲುಗಳು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಈ ಪ್ಲಾಸ್ಟಿಕ್ ರಾಶಿಗಳು ಹೇಗೆ ಉಂಟಾಗುತ್ತವೆ ಎಂಬುದರ ಕುರಿತು ನಾವೆಲ್ಲರೂ ಯೋಚಿಸಬೇಕಾಗಿದೆ.

ಅನಗತ್ಯ ಹಾಗೂ ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದಾಗಿ ಪರಿಸರವು ಈ ಭಯಾನಕ ರೂಪವನ್ನು ಪಡೆದುಕೊಂಡಿದೆ, ಇದರ ವಿಡಿಯೋಗಳು ಮತ್ತು ಚಿತ್ರಗಳನ್ನು ನಾವು ಆಗಾಗ್ಗೆ ನೋಡುತ್ತಿರುತ್ತೇವೆ. ಸಂಯಮಿತ ಜೀವನಶೈಲಿಯಿಂದ ನಾವು ಪ್ರಕೃತಿಯನ್ನು ಮತ್ತು ನಮ್ಮನ್ನು ಉಳಿಸಬಹುದು. ಈ ತಿಳುವಳಿಕೆ ನಮ್ಮೆಲ್ಲರಿಗೂ ಇದ್ದೇ ಇದೆ, ಆದರೆ ಅದನ್ನು ಆಚರಣೆಯಲ್ಲಿ ತರುವಲ್ಲಿ ತೊಂದರೆಯಾಗುತ್ತಿದೆ. ಜಾಗತಿಕ ತಾಪಮಾನ ಏರಿಕೆಯಾಗುತ್ತಿರುವ ವಿಷಯ ನಮಗೆಲ್ಲರಿಗೂ ಗೊತ್ತಿರುವಂಥದ್ದೇ. ಭೂಮಿಯ ಸರಾಸರಿ ಉಷ್ಣತೆಯು ಇನ್ನೊಂದು ಡಿಗ್ರಿ ಹೆಚ್ಚಾದರೂ ಸಹ ಬದುಕುವುದು ಕಷ್ಟವಾಗುತ್ತದೆ. ಭಾರತದಲ್ಲೇ ಅನೇಕ ಸ್ಥಳಗಳಲ್ಲಿ ತಾಪಮಾನವು 50–52 ಡಿಗ್ರಿಗಳವರೆಗೆ ತಲುಪುತ್ತಿದೆ. ಒಂದು ವೇಳೆ 60 ಡಿಗ್ರಿಗಿಂತ ಹೆಚ್ಚಾದರೆ ಮನುಷ್ಯನು ಜೀವಂತವಾಗಿರಲು ಸಾಧ್ಯವಿಲ್ಲ. ಹಾಗೂ ಓಝೋನ್ ಪದರದಲ್ಲಿ ಆಗುತ್ತಿರುವ ರಂಧ್ರದಿಂದಲೂ ಸಹ ವಿವಿಧ ಸಮಸ್ಯೆಗಳು ಉದ್ಭವಿಸುತ್ತಿವೆ.

> ಗಿಡಗಳನ್ನು ನೆಡಿ, ಮರಗಳನ್ನು ಬೆಳೆಸಿ ಎಂಬ ಕೂಗು ಎಲ್ಲೆಡೆ ಕೇಳಿಬರುತ್ತಿದೆ.
>
> **ಹೀಗೇಕೆ ಹೇಳುತ್ತಿರುತ್ತಾರೆ ಎಂಬ ಬಗ್ಗೆ ಯೋಚಿಸಬೇಕು. ನಾವು ಹಸಿರನ್ನು ಹೆಚ್ಚಿಸಬೇಕು, ನಮ್ಮ ಭಾರತದ ಮೂರನೇ ಒಂದು ಭಾಗದಷ್ಟು ಭೂಮಿ ಅರಣ್ಯ ಪ್ರದೇಶವಾಗಿರಬೇಕು.**

ಸೂರ್ಯನ ಕಿರಣಗಳು ನೇರವಾಗಿ ನಮ್ಮನ್ನು ತಲುಪುವುದಿಲ್ಲ, ಅವು ಓಝೋನ್ ಪದರದ ಮೂಲಕ ಶೋಧಿಸಿ ನಂತರ ನಮ್ಮನ್ನು ತಲುಪುತ್ತವೆ. ಓಝೋನ್ ಪದರವು ಹಾನಿಕಾರಕ ನೇರಳಾತೀತ ಕಿರಣಗಳು (ಅಲ್ಟ್ರಾ–ವೈಲೆಟ್ ಕಿರಣಗಳು) ನಮ್ಮನ್ನು ತಲುಪದಂತೆ ತಡೆಯುತ್ತವೆ. ಈ ನೇರಳಾತೀತ ಕಿರಣಗಳು ನೇರವಾಗಿ ನಮ್ಮನ್ನು ತಲುಪಲು ಪ್ರಾರಂಭಿಸಿದರೆ, ಅದು ಗಂಭೀರ ದುಷ್ಪರಿಣಾಮವನ್ನು ಬೀರುತ್ತದೆ ಮತ್ತು ಬದುಕುವುದು ಕಷ್ಟಕರವಾಗುತ್ತದೆ. ಇದರ ಬಗ್ಗೆ ಜಾಗೃತಿ ಕೂಡ ಮೂಡುತ್ತಿರುವುದರಿಂದ ಅನೇಕ ದೇಶಗಳಲ್ಲಿ ಇದರ ನಿವಾರಣೆಗೆ ಪ್ರಯತ್ನಗಳು ನಡೆದಿವೆ. ಪರಿಸ್ಥಿತಿಯು ತಕ್ಕ ಮಟ್ಟಿಗೆ ಸುಧಾರಿಸಿದೆ. ಆದರೆ ಜಾಗತಿಕ ತಾಪಮಾನ ಏರಿಕೆಯ ಸಮಸ್ಯೆಯನ್ನು ಪರಿಹರಿಸಲು ಈ ಪ್ರಯತ್ನಗಳು ಸಾಕಾಗುವುದಿಲ್ಲ.

ಇನ್ನೊಂದು ಗಂಭೀರ ಸಮಸ್ಯೆ ಇದೆ, ಅದುವೇ ಆಮ್ಲ ಮಳೆ (ಆಸಿಡ್ ರೇನ್). ಊಹಿಸಿಕೊಳ್ಳಿ, ಒಂದು ವೇಳೆ ನದಿಗಳಲ್ಲಿ ನೀರಿನ ಬದಲು ಆಮ್ಲ (ಆಸಿಡ್) ಹರಿಯಲು ಶುರುವಾದರೆ ಏನಾಗಬಹುದು! ಇದು ಕೇವಲ ಕಲ್ಪನೆಗೆ ಸೀಮಿತವಾಗಿಲ್ಲ. ಪರಿಸರದಲ್ಲಿ ಹೆಚ್ಚುತ್ತಿರುವ ಸಲ್ಫರ್



ಡೈಆಕ್ಸೈಡ್ ಮತ್ತು ನೈಟ್ರೇಟ್ ನ ಪ್ರಮಾಣದಿಂದಾಗಿ ಆಸಿಡ್ ಮಳೆಯು ಒಂದು ಸಾಮಾನ್ಯ ವಿದ್ಯಮಾನವಾಗುತ್ತಿದೆ. ಹಲವೆಡೆ ಆಸಿಡ್ ಮಳೆಯು ಅಲ್ಲಿನ ಜೀವನದ ಮೇಲೆ ಪರಿಣಾಮ ಬೀರಿದೆ. ಸಮುದ್ರ ಮಾಲಿನ್ಯವೂ ಹೆಚ್ಚುತ್ತಿದೆ. ಇನ್ನು ಬಳಕೆಯ ನಂತರ ಎಸೆಯಲಾದ ಪ್ಲಾಸ್ಟಿಕ್ ಅಂತಿಮವಾಗಿ ಸಮುದ್ರವನ್ನು ತಲುಪುತ್ತದೆ ಮತ್ತು ಅದನ್ನು ಕಲುಷಿತಗೊಳಿಸುತ್ತದೆ, ಇದು ಸಮುದ್ರ ಜೀವಿಗಳ ಮೇಲೆ ಪರಿಣಾಮ ಬೀರುತ್ತದೆ. ದೊಡ್ಡ ದೊಡ್ಡ ಹಡಗುಗಳು ತೈಲವನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸಾಗಿಸುವಾಗ, ಹಲವು ಬಾರಿ ಬೇರೆ ಬೇರೆ ಕಾರಣಗಳಿಂದಾಗಿ ತೈಲವು ನೀರಿನಲ್ಲಿ ಸೋರಿಕೆಯಾಗುತ್ತದೆ ಮತ್ತು ಆ ತೈಲವು ಸಮುದ್ರದ ಮೇಲ್ಮೈಯಲ್ಲಿ ಸಂಗ್ರಹವಾಗಿ ತೇಲುತ್ತಾ ಇರುತ್ತದೆ. ಕೆಲವು ವರ್ಷಗಳ ಹಿಂದೆ ಮಲೇಷ್ಯಾ ಬಳಿ ಇದೇ ರೀತಿಯ ಘಟನೆ ಸಂಭವಿಸಿತ್ತು, ಇದರಿಂದಾಗಿ ಹಿಂದೂ ಮಹಾಸಾಗರದಲ್ಲಿ ಅಪಾರ ಸಂಖ್ಯೆಯಲ್ಲಿ ಮೀನುಗಳು ಸತ್ತವು. ನಾವು ನಮ್ಮ ದೈನಂದಿನ ಇಂಧನ ಬಳಕೆಯನ್ನು ನಿಯಂತ್ರಣಕ್ಕೆ ತರಬೇಕು ಹಾಗೂ ಎಚ್ಚರಿಕೆಯಿಂದ ಮತ್ತು ಸಂಯಮದಿಂದ ಬಳಸಬೇಕು.

## ಅರಣ್ಯದ ಮಹತ್ವ

ಒಟ್ಟು ಭೂಮಿಯ ಶೇ.33 ರಷ್ಟು ಭಾಗವು ಅರಣ್ಯವಾಗಿರಬೇಕು ಎಂದು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಪ್ಪಂದವಾಗಿದೆ. ಭಾರತವೂ ಸಹ ರಾಷ್ಟ್ರೀಯ ಅರಣ್ಯ ನೀತಿಯಲ್ಲಿ ಇದೇ ಮಾತನ್ನು ಪುನರುಚ್ಚರಿಸಿದೆ, ಅದರೊಳಗೆ 33 ಪ್ರತಿಶತದಷ್ಟು ಅರಣ್ಯ ಪ್ರದೇಶದ ಗುರಿಯನ್ನು ಇಡಲಾಗಿದೆ, ಆದರೆ ಈಗ ಉಳಿದಿರುವ ಅರಣ್ಯವೆಷ್ಟು? ಕೇವಲ 21.76 ಪ್ರತಿಶತ. ಒಂದು ವೇಳೆ 3.41 ಪ್ರತಿಶತದಷ್ಟು ಇತರ ಮರಗಳನ್ನೂ ಸೇರಿಸಿದರೆ, ಒಟ್ಟು ಅರಣ್ಯ ಪ್ರದೇಶವು 25.17 ಪ್ರತಿಶತ ಮಾತ್ರ ಆಗುತ್ತದೆ. 'ಭಾರತ ಅರಣ್ಯ ಸ್ಥಿತಿಗತಿ ವರದಿ (ಐ.ಎಸ್.ಎಫ್.ಆರ್) 2023' ರ ಪ್ರಕಾರ 1445 ಚದರ ಕಿ.ಮೀ. ಅರಣ್ಯ ಹೆಚ್ಚಳವಾಗಿದೆ. ಆದರೂ ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪ್ರಯತ್ನಗಳು ನಡೆಯುವುದು ಅವಶ್ಯಕ. ಗಿಡಗಳನ್ನು ನೆಡಿ, ಮರಗಳನ್ನು ಬೆಳೆಸಿ ಎಂಬ ಕೂಗು ಎಲ್ಲೆಡೆ ಕೇಳಿಬರುತ್ತಿದೆ. ಹೀಗೇಕೆ  ಹೇಳುತ್ತಿರುತ್ತಾರೆ ಎಂಬ ಬಗ್ಗೆ ಯೋಚಿಸಬೇಕು. ನಾವು ಹಸಿರನ್ನು ಹೆಚ್ಚಿಸಬೇಕು, ನಮ್ಮ ಭಾರತದ ಮೂರನೇ ಒಂದು ಭಾಗದಷ್ಟು ಭೂಮಿ ಅರಣ್ಯ ಪ್ರದೇಶವಾಗಿರಬೇಕು. ಕೆಲವು ಸ್ಥಳಗಳಲ್ಲಿ ನಾವು ಹಾಗೆ ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ ಮರುಭೂಮಿಯಲ್ಲಿ ಮರಗಳನ್ನು ನೆಡುವುದು ಸಾಧ್ಯವಿಲ್ಲ, ಲೇಹ್ ಲಡಾಖ್‌ನಲ್ಲಿರುವ ಹಿಮಾವೃತ ಪ್ರದೇಶಗಳಲ್ಲಿ  ಮತ್ತು ಹಿಮಾಲಯದಲ್ಲಿಯೂ ಇದು ಸಾಧ್ಯವಿಲ್ಲ. ಆದ್ದರಿಂದ, ಲಭ್ಯವಿರುವ 33 ಪ್ರತಿಶತದಷ್ಟು ಭೂಮಿಯನ್ನು ಅರಣ್ಯೀಕರಣ ಮಾಡಬೇಕು ಮತ್ತು ಎಲ್ಲಿ ಸಾಧ್ಯವೋ ಅಲ್ಲಿ ಹೆಚ್ಚು ಗಿಡಮರಗಳನ್ನು ನೆಡಬೇಕು. ಈ ಗುರಿಯನ್ನು ಸಾಧಿಸಲು ದೇಶದಲ್ಲಿ ಒಂದು ದೊಡ್ಡ ಅಭಿಯಾನವನ್ನು ನಡೆಸಬೇಕು.


*3ನೇ ಪುಟಕ್ಕೆ...*

## ಸಂಸ್ಮರಣೆ

# ಮಾತೆ ಶಾರದಾದೇವಿ

ಶ್ರೀಮಾತೆ ಶಾರದಾದೇವಿ ಹುಟ್ಟಿದ್ದು 22ನೇ ಡಿಸೆಂಬರ್ 1853, ಪಶ್ಚಿಬಂಗಾಳದ ಜಯರಾಂಬಾಟಿಯಲ್ಲಿ. ತಂದೆ ರಾಮಚಂದ್ರ ಮುಖರ್ಜಿ, ತಾಯಿ ಶ್ಯಾಮಸುಂದರಿದೇವಿ. ಐದನೇ ವಯಸ್ಸಿಗೆ ರಾಮಕೃಷ್ಣರೊಡನೆ ವಿವಾಹ! ಕಾಮುಕತೆಯ ಕಿಲುಬೇ ಇಲ್ಲದ ದಾಂಪತ್ಯದ ಆದರ್ಶ ತೋರಲೆಂದೇ ಅವತರಿಸಿ, ಒಬ್ಬರಿಗೊಬ್ಬರು ಒರೆಸಿದಂತಿತ್ತು ಈ ಜೋಡಿ. ಇಲ್ಲಿ ಪತಿಯೇ ಗುರುವಾಗಿ ಸತಿಗೆ ಆಧ್ಯಾತ್ಮಿಕ ಅನುಭವಗಳನ್ನು ಧಾರೆ ಎರೆಯುತ್ತಾನೆ. ತತ್ಪರಿಣಾಮ ಆಕೆ ಪರಿಪೂರ್ಣತೆ ಸಾಧಿಸಿ ಪತಿಯಂತೆ ದಿವ್ಯ ಜೀವನ ತತ್ತ್ವಗಳನ್ನು ಜಗತ್ತಿಗೆ ಧಾರೆಯೆರೆಯುತ್ತಾಳೆ. ತನ್ನ ಸೂನುಗಳ ತಾಯಿಯಾಗಬೇಕಿದ್ದವಳು ಜಗಜ್ಜನನಿ, ಲೋಕಮಾತೆ, ಆದ್ಯಾಶಕ್ತಿ ಶ್ರೀಮಾತೆ ಎಂದೆಲ್ಲಾ ಜಗದ ಜನರೆದುರು ಶೋಭಿಸುತ್ತಾಳೆ.



ಶ್ರೀರಾಮಕೃಷ್ಣರು ದಾಂಪತ್ಯದ ಕರ್ತವ್ಯ ತಿಳಿದಿದ್ದರು. ಮಡದಿ ಇಚ್ಛಿಸಿದರೆ ತಮ್ಮ ಜೀವನದ ಆದರ್ಶ ಭಗವದ್‌ಪ್ರಾಪ್ತಿಯನ್ನು ತ್ಯಾಗಮಾಡಲು ಸಿದ್ಧರಾಗಿದ್ದರು. ಆದರೆ ಶ್ರೀಮಾತೆ ಕೂಡಾ ತಮ್ಮಿಂದ ಪತಿಯ ಋಷಿಸದೃಶ ದೈವೀ ಜೀವನವನ್ನು ಸಂಸಾರಗೋಜಲುಗೆಳೆಯಲು ಸ್ವಲ್ಪವೂ ಇಷ್ಟವಿರಲಿಲ್ಲ. ಶಾರದಾ ಮಾತೆ ಪರಿಶುದ್ಧರೂ, ಮಹಿಮಾವಂತರೂ, ಉದಾತ್ತ ಮನೋಭಾವದವರೂ ಆಗಿದ್ದರು. ಪತಿಯ ಸೇವೆ ಹಾಗೂ ಅವರ ಆಣತಿಯಂತೆ ತಮ್ಮ ಜೀವನೋದ್ಧಾರ ಮಾಡಿಕೊಳ್ಳುವುದಷ್ಟೇ ಶಾರದಾ ಮಾತೆ ಬಯಸಿದ್ದರು. ಅದರಂತೆ ಶ್ರೀರಾಮಕೃಷ್ಣರು ಅಧ್ಯಾತ್ಮಿಕ ಹಾಗೂ ಅಲೌಕಿಕ ಉನ್ನತ ಜ್ಞಾನವನ್ನು ಅವರಿಗೆ ಧಾರೆಯೆರೆದರು.

ಮಂದಿರದಲ್ಲಿದ್ದ ಭವತಾರಿಣಿ ಹಾಗೂ ಬಳಿಗಿದ್ದ ಶಾರದಾಮಣಿ ಇಬ್ಬರೂ ಒಂದೇ ಎಂದು ಭಾವಿಸಿದ್ದ ರಾಮಕೃಷ್ಣರು ಆಕೆಯನ್ನು ಸಾಕ್ಷಾತ್ ಜಗನ್ಮಾತೆಯ ಮೂರ್ತ ಸ್ವರೂಪವೆಂದು ಹೇಳುತ್ತಿದ್ದರು. ಷೋಡಶಿ ಪೂಜಾ ಉತ್ಸವದಂದು ಶಾರದಾ ಮಾತೆಯಲ್ಲಿ ಕಾಳಿಯನ್ನು ಆವಾಹಿಸಿ ಪೂಜೆಗೈದರು. ಕ್ರಮಬದ್ಧ ಪೂಜೆಗೈಯ್ಯುತ್ತಿದ್ದ ರಾಮಕೃಷ್ಣರು ಭಾವಸಮಾಧಿಗೇರಿದರೆ, ಪೂಜೆಗೊಳ್ಳುತ್ತಿದ್ದ ಶಾರದಾ ಮಾತೆಯೂ ಸಮಾಧಿಸ್ಥಿತಿ ತಲುಪಿದ್ದರು! ಪೂಜೆಗಯ್ಯುತ್ತಿದ್ದವರು ಹಾಗೂ ಪೂಜೆಗೊಳ್ಳುತ್ತಿದ್ದವರಿಬ್ಬರೂ ಅನಂತತೆಯಲ್ಲಿ, ಬ್ರಹ್ಮಭಾವದಲ್ಲಿ ಒಂದಾಗಿದ್ದರು! ಅನಂತರ ತಮ್ಮ ಉಪಾಸನೆಯ ಪೂರ್ಣಫಲವನ್ನು ಜಗದ್ಧಾತ್ರಿ ಕಾಳೀಮಾತೆಗೆ ಸಮರ್ಪಿಸಿದ ರಾಮಕೃಷ್ಣರಿಗೆ ಅದುವೇ ಪರಿಪೂರ್ಣತೆಯ ಘಟ್ಟವಾಗಿತ್ತು, ಅದನ್ನು ತಲುಪಲು ಶಾರದಾ ಮಾತೆಯೇ ಮಹಾಮಾರ್ಗವಾಗಿದ್ದರು.

ಶ್ರೀರಾಮಕೃಷ್ಣರ ದೇಹತ್ಯಾಗದ ನಂತರ ಅವರ ಶಿಷ್ಯಕೋಟಿಗೆಲ್ಲಾ ದಾರಿ ತೋರಿದ್ದೂ ಶ್ರೀಮಾತೆಯವರೆ! ಮೊದಮೊದಲು ಕೆಲಭಕ್ತರು ಶ್ರೀಮಾತೆಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿರಲಿಲ್ಲವಾದರೂ ನಂತರದ ದಿನಗಳಲ್ಲಿ ಅವರ ಆದ್ಯಾಶಕ್ತಿ ಪ್ರಕಟವಾಗುತ್ತಿರುವುದನ್ನು ಕಂಡು ರಾಮಕೃಷ್ಣರಲ್ಲಿಯ ಭಾವವನ್ನೇ ತಳೆದರು. ಅವರ ಬಳಿ ಮಾರ್ಗದರ್ಶನಕ್ಕಾಗಿ, ಸಾಂತ್ವನಕ್ಕಾಗಿ, ಅಧ್ಯಾತ್ಮಿಕ ವಿಚಾರಗಳಿಗಾಗಿ, ಮಂತ್ರದೀಕ್ಷೆಗಾಗಿ ಎಲ್ಲಕಡೆಯಿಂದ ಜನರು ಬರುತ್ತಿದ್ದರು. ಇದಕ್ಕೆಲ್ಲಾ ರಾಮಕೃಷ್ಣರಿರುವಾಗಲೇ ಅವರನ್ನು ಈ ನಿಟ್ಟಿನಲ್ಲಿ ಸಾಕಷ್ಟು ತಯಾರಿ ಮಾಡಿ ಹೋಗಿದ್ದರು. ರಾಮಕೃಷ್ಣರ ಸಂನ್ಯಾಸಿ ಶಿಷ್ಯರೆಲ್ಲ ಶ್ರೀಮಾತೆಯನ್ನು ಆಳವಾಗಿ ಅನುಸರಿಸುತ್ತಿದ್ದರು, ಗೌರವಿಸುತ್ತಿದ್ದರು ಮತ್ತು ಪಾಲಿಸುತ್ತಿದ್ದರು. ವಿಶ್ವವನ್ನೇ ಜಯಿಸಿದ ಸಿಡಿಲ ಸಂತ ಸ್ವಾಮಿ ವಿವೇಕಾನಂದರೂ ಅವರ ಶ್ರೀರಕ್ಷೆಯಲ್ಲಿಯೇ ಪಶ್ಚಿಮಕ್ಕೆ ಧರ್ಮಪ್ರಸಾರ ಮಾಡಲು ಹೋಗಿದ್ದರು. ಶ್ರೀಮಾತೆಯವರ ಮಹಿಮೆ ಎಷ್ಟು ಅಪಾರವಾದದ್ದು ಎಂದರೆ ಸಾವಿರಾರು ಜನ ಅಕ್ಷರಶಃ ಅವರನ್ನು ನಿಜವಾಗಿಯೂ ಪೂಜಿಸುತ್ತಿದ್ದರು. ಆದರೂ ಅವರು ಸ್ವಲ್ಪವೂ ಅಹಂಕಾರ ಹೊಂದದೆ ನಿರ್ಮಮ, ನಿರಹಂಕಾರದಿಂದ ಇದ್ದರು! ನಿಜಕ್ಕೂ ಇದು ಸಾಮಾನ್ಯ ಮನುಷ್ಯರಿಂದ ಸಾಧ್ಯವಾಗದು, ಇದೆಲ್ಲಾ ಅವರ ದಿವ್ಯತೆಯಿಂದ ಆದದ್ದು!

ಕಳೆದ ಶತಮಾನದ ಮಧ್ಯೆ ಭಾರತದ ಸ್ತ್ರೀತ್ವಕ್ಕೆ ಒಂದು ದುರ್ಭರ ಸಮಸ್ಯೆ ಎದುರಾಗಿತ್ತು. ಪಾಶ್ಚಾತ್ಯ ನಾಗರಿಕತೆಯ ಪ್ರಬಲ ಅಲೆಯೊಂದು ಹಬ್ಬಿ ಸಮಗ್ರ ಭಾರತವನ್ನೇ ಬುಡಮೇಲಾಗಿಸುವುದರಲ್ಲಿತ್ತು. ಅಂದು ಜನತೆಯಲ್ಲಿ, ಭಾರತದ ಭವ್ಯ ಸಂಪ್ರದಾಯಗಳನ್ನೇ ಬಲಿತೆತ್ತು ಪಾಶ್ಚಾತ್ಯರನ್ನು ಅನುಕರಿಸುವ ಹುಚ್ಚು ಬೆಳೆದಿತ್ತು. ಭಾರತೀಯ ಪರಂಪರೆ ಎತ್ತಿಹಿಡಿಯುವುದು ಉದಾತ್ತ ಅಂಶಗಳಾದ ಸ್ತ್ರೀಯ ಪಾವಿತ್ರ್ಯ, ಅವಳ ಮಾತೃತ್ವ. ಇದಕ್ಕೆ ಕಾರಣವೇನೆಂದರೆ, ಮುಕ್ತಿ, ಆತ್ಮಾನುಭವ – ಇವೇ ಭಾರತದ ಆದರ್ಶ. ಈ ಆದರ್ಶವನ್ನು ಸಾಧಿಸಲು ಆತ್ಮಸಂಯಮ, ಇಂದ್ರಿಯನಿಗ್ರಹ ಅನಿವಾರ್ಯ. ಭೋಗವಾದವನ್ನು ಅನುಸರಿಸಿದಲ್ಲಿ ಈ ಆದರ್ಶದ ಸಿದ್ಧಿ ಸಾಧ್ಯವಿಲ್ಲ. ಆದ್ದರಿಂದಲೇ ಭಾರತದಲ್ಲಿ ಸ್ತ್ರೀಯರ ಕುರಿತಾದ ದೃಷ್ಟಿಕೋನ ಸಂಪೂರ್ಣ ವಿಭಿನ್ನ. ಸ್ವಾಮಿ ವಿವೇಕಾನಂದರು ಹೇಳಿದಂತೆ, ಭಾರತದ ಆದರ್ಶ ಸ್ತ್ರೀಯರೆಂದರೆ ಸೀತಾ–ಸಾವಿತ್ರೀ–ದಮಯಂತಿಯರು. ಹೀಗೆ, ಪಾಶ್ಚಾತ್ಯ ಹಾಗೂ ಭಾರತೀಯ ದೃಷ್ಟಿಕೋನಗಳು ಪರಸ್ಪರ ವಿರುದ್ಧ, ಮುಂಬರುವ ಜನಾಂಗ ಇವುಗಳಲ್ಲಿ ಒಂದನ್ನು ಆರಿಸಿಕೊಳ್ಳಬೇಕಾಗುತ್ತದೆ; ಇಲ್ಲವೆ ಇವೆರಡರ ನಡುವೆ ವಿವೇಕಪೂರ್ಣವಾದ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಇದನ್ನು ಸತ್ಯಕಾಲದ ಈ ಜನಾಂಗಕ್ಕೆ ಸಾಕ್ಷ್ಯಚಿತ್ರದಂತೆ ತಿಳಿಪಡಿಸಲು ಅವತರಿಸಿ ಬಂದವಳೇ ಭವತಾರಿಣಿ ರೂಪಿ, ಆದ್ಯಾಶಕ್ತಿ ಸ್ವರೂಪಿ ಶಾರದಾದೇವಿ.

## ಅಯೋಧ್ಯಾರಾಮ

ಪುಸ್ತಕ ಪರಿಚಯ

**ಲೇಖಕ:** ನಾರಾಯಣ ಶೇವಿರೆ
**ಪ್ರಕಾಶನ:** ಅಯೋಧ್ಯಾ ಪಬ್ಲಿಕೇಶನ್ಸ್
**ಬೆಲೆ:** ರೂ. 99




ಭಾರತದ ಇತಿಹಾಸದಲ್ಲಿ ದೊಡ್ಡ ಸಂಚಲನಮೂಡಿಸಿದ ಆಂದೋಲನ ಅಯೋಧ್ಯೆ ರಾಮಮಂದಿರದ್ದು, ಐನೂರು ವರ್ಷಗಳ ಸುದೀರ್ಘ ಆಂದೋಲನವಿದು. ನಿರಂತರ ನಡೆದಿದ್ದು ಸಂಘರ್ಷವೇ. ಬಲಿಪಡೆದದ್ದು ಆಂದೋಲನಕಾರರನ್ನೇ. ಅಯೋಧ್ಯಾ ಆಂದೋಲನದ ಕಾರಸೇವಕರಲ್ಲಿ ಇದ್ದುದು ಒಂದು ಕೇಸರಿ ಬಟ್ಟೆತುಂಡು, ಅದು ಶಸ್ತ್ರವಲ್ಲ, ಅಸ್ತ್ರವಂತೂ ಅಲ್ಲವೇ ಅಲ್ಲ. ಪ್ರಜಾತಂತ್ರಕ್ಕೆ ಸೂಕ್ತವಾದ ರಾಮನ ಈ ನಿರ್ದ್ವೇಷದ ದಾರಿ ಕಾರಸೇವಕರಿಗೆ ಪ್ರೇರಣೆ.

ರಾಮನ ವ್ಯಕ್ತಿತ್ವವನ್ನು ಈ ಹಿನ್ನೆಲೆಯಲ್ಲಿ ಒಂದಿಷ್ಟು ನೋಡುವ ಕಿರು ಯತ್ನವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ. ಜತೆಗೆ ಆಂದೋಲನ ಸಂಬಂಧಿತ ವಿಷಯಗಳ ಕಡೆಗೂ ನೋಟವನ್ನು ಹರಿಸಲಾಗಿದೆ. ವಾಲ್ಮೀಕಿ ಕಾವ್ಯದ ರಾಮನನ್ನೂ, ಐತಿಹಾಸಿಕ ಪುರುಷ ರಾಮನನ್ನೂ, ಕಲಿಯುಗದಲ್ಲಿ ಬಗೆಬಗೆಯ ಪರಿಸ್ಥಿತಿಗಳಿಗೆ ಒಡ್ಡಿಕೊಳ್ಳಬೇಕಾಗಿಬಂದ ರಾಮನನ್ನೂ ತೂಗುತ್ತ, ತೌಲನಿಕವಾಗಿ ನೋಡುತ್ತ, ಒಂದರ ಬೆಳಕಲ್ಲಿ ಇನ್ನೊಂದನ್ನು ಅವಲೋಕಿಸುತ್ತ ಸಾಗುವ ವಿಶಿಷ್ಟ ಪುಸ್ತಕ 'ಅಯೋಧ್ಯಾ ರಾಮ'. ರಾಮಾಯಣದ ಎಲ್ಲ ಪಾತ್ರಗಳನ್ನೂ ವಿಶ್ಲೇಷಿಸುವ, ಆದರೆ ಎಲ್ಲೂ ನ್ಯಾಯಾಧೀಶರ ತೀರ್ಪಿನಂಥ ನಿರ್ಣಯಗಳನ್ನು ಕೊಡದ, ಓದುಗರ ಬುದ್ಧಿಯಲ್ಲಿ ಹೊಸ ಹೊಸ ಚಿಂತನೆಗಳನ್ನು ಮೊಳೆಯಿಸುವ ಕೃತಿ 'ಅಯೋಧ್ಯಾ ರಾಮ'.

**ಸಂಪರ್ಕ: 7795827307, 6360581957**

## ಭದ್ರತಾ ಸಿಬ್ಬಂದಿಗಳ ಜೊತೆ ತಾಳ್ಮೆಯ ವ್ಯವಹಾರವಿರಲಿ

ನಾಗರಿಕ ಶಿಷ್ಟಾಚಾರ

ಸೆಕ್ಯೂರಿಟಿ ಗಾರ್ಡ್ ಸೇರಿದಂತೆ ಎಲ್ಲಾ ರೀತಿಯ ಭದ್ರತಾ ಸಿಬ್ಬಂದಿಗಳ ಜೊತೆ ತಾಳ್ಮೆಯ ವ್ಯವಹಾರದ ಸ್ವಭಾವ ನಮ್ಮದಿರಲಿ. ನಮ್ಮ ಸಹಕಾರಕ್ಕೇ ಅವರಿದ್ದಾರೆ ಎಂಬುದನ್ನು ನೆನಪಿಡೋಣ. ಬೇರೆ ರಾಜ್ಯಗಳಿಂದ, ಊರುಗಳಿಂದ ಹೊಟ್ಟೆಪಾಡಿಗಾಗಿ, ಉದ್ಯೋಗಕ್ಕಾಗಿ ನಮ್ಮ ಊರುಗಳಿಗೆ ಬಂದು ನೆಲೆಸಿರುವ ಇತರ ಭಾರತೀಯರನ್ನೂ ನಮ್ಮವರೆಂದೇ ಭಾವಿಸಿ ಅವರೊಂದಿಗಿನ ವ್ಯವಹಾರ ಉತ್ತಮವಾಗಿರಲಿ. ಇಲ್ಲಿಯ ಸ್ಥಾನೀಯ ಆಚಾರ, ವಿಚಾರ, ಭಾಷೆಯ ಮಹತ್ವವನ್ನೂ ಅವರಿಗೇ ಆತ್ಮೀಯತೆಯಿಂದಲೇ ತಿಳಿಸುವ ಪ್ರಯತ್ನ ಮಾಡೋಣ.



## ಸಾವಿರಾರು ಜನರ ಪ್ರಾಣವನ್ನು ಉಳಿಸಿದ ಸ್ವಯಂಸೇವಕರ ಸಮಯ ಪ್ರಜ್ಞೆ

ಸೇವಾಗಾಥಾ

ರಾಜಸ್ಥಾನದ ಜೈತಪುರ ಅಣೆಕಟ್ಟಿನಿಂದ ಹೊರಹರಿದ ನೀರು ಗುಜರಾತ್ ಸಮೀಪಿಸುತ್ತಿದ್ದಂತೆ ಭೀಕರ ಪ್ರವಾಹವಾಗಿ ಬದಲಾಯಿತು. ವಿಪತ್ತಿನ ಸುಳಿವು ಸಿಗುತ್ತಿದ್ದಂತೆಯೇ ಪ್ರವಾಹಪೀಡಿತ ಪ್ರದೇಶದ ಊರುಗಳತ್ತ ಧಾವಿಸಿದ ಸ್ವಯಂಸೇವಕರು ರಕ್ಷಣಾಯೋಜನೆ ರೂಪಿಸಿದರು ಮತ್ತು ತಮ್ಮ ಜಾಗರೂಕತೆ ಹಾಗೂ ಎಡೆಬಿಡದ ಪರಿಶ್ರಮದಿಂದ ಸಾವಿರಾರು ಪ್ರಾಣಗಳನ್ನು ಉಳಿಸಿದರು.

ಜೈತಪುರ ಜಲಾಶಯದಿಂದ ಉಕ್ಕಿ ಗುಜರಾತಿನ ಕಡೆಗೆ ನುಗ್ಗುತ್ತಿರುವ ಹುಚ್ಚುಹೊಳೆಯ ಕುರಿತಾಗಿ ಸರಕಾರ ಎಚ್ಚರಿಕೆ ನೀಡಿದೊಡನೆಯೇ ಸ್ವಯಂಸೇವಕರ ರಕ್ಷಣಾಪಡೆ ಸಜ್ಜಾಗಿಬಿಟ್ಟಿತ್ತು. ಜುಲೈ 23ರ ರಾತ್ರಿ ಒಂದು ಗಂಟೆಗೆ ಪಾಲನಪುರ ಜಿಲ್ಲಾ ಸೇವಾ ಪ್ರಮುಖರಾದ ಗೋವಿಂದಭಾಯಿ ಪ್ರಜಾಪತಿ ಅವರಿಗೆ ರಾಜಸ್ಥಾನದ ಜಲಾಶಯದ ನೀರು ಗುಜರಾತಿನೆಡೆಗೆ ವೇಗವಾಗಿ ಸಾಗುತ್ತಿರುವ ಮಾಹಿತಿ ತಲುಪಿತು. ಕೂಡಲೇ ಧಾನೇರಾ, ಬನಾಸ್ಕಾಂತಾ ಹಾಗೂ ಡೀಸಾ ಮುಂತಾದೆಡೆಯ ಹಿರಿಯ ಸ್ವಯಂಸೇವಕರ ನಡುವೆ ತುರ್ತು ಸಮಾಲೋಚನೆಗಳು ಮೊಬೈಲ್ ಮುಖಾಂತರವೇ ನಡೆದು, ಬಂದೆರಗಿರುವ ಸಂಕಷ್ಟವನ್ನು ಎದುರಿಸಲೆಂದು ಸಮಿತಿಯೊಂದರ ರಚನೆಯಾಯಿತು.

ಆ ಸಮಿತಿಯ ಆದೇಶದ ಅನ್ವಯ ತಮ್ಮತಮ್ಮ ಸುರಕ್ಷಿತ ನೆಲೆಗಳಿಂದ ಹೊರಟ ಸ್ವಯಂಸೇವಕರು ತಂಡೋಪತಂಡವಾಗಿ ನೆರೆಪೀಡಿತ ತಗ್ಗು ಪ್ರದೇಶಗಳಿಗೆ ಧಾವಿಸತೊಡಗಿದರು. ಮೈಕ್ ಅಳವಡಿಸಿದ ವಾಹನಗಳಿಂದ ಅಪಾಯದ ಪ್ರದೇಶದ ಹಳ್ಳಿಗಳಿಗೆಲ್ಲಾ ಬರಲಿರುವ ವಿಪತ್ತಿನ ಮುನ್ಸೂಚನೆಯನ್ನು ರಾತ್ರಿಯಿಡೀ ಅನೌನ್ಸ್‌ಮೆಂಟ್ ಮೂಲಕ ಸಾರಲಾಯಿತು. ಧಾನೇರಾ ತಾಲೂಕೊಂದರಲ್ಲೇ ಸುಮಾರು 8000 ಜನರನ್ನು ಪ್ರಾಣಾಪಾಯದಿಂದ ಪಾರು ಮಾಡಲಾಯಿತು. ವರದಿಯೊಂದರ ಪ್ರಕಾರ ಸದರಿ ಆಪತ್ಕಾಲದಲ್ಲಿ 1871 ಸ್ವಯಂಸೇವಕರು ಹಗಲಿರುಳೂ ಶ್ರಮಿಸಿದರು. ಈ ಸೇವಾಕಾರ್ಯದಲ್ಲಿ ಸುಮಾರು



ಐದೂವರೆ ಲಕ್ಷ ಊಟದ ಪೊಟ್ಟಣಗಳನ್ನು, 23 ಸಾವಿರಕ್ಕೂ ಹೆಚ್ಚು ದಿನಸಿ ಕಿಟ್ಟುಗಳನ್ನು, ಅಸಂಖ್ಯ ನೀರಿನ ಬಾಟಲಿಗಳನ್ನು, ಹಾಸಿಗೆ, ಬಟ್ಟೆ ಮತ್ತು ಡೇರೆಗಳನ್ನು ಸಂತ್ರಸ್ತ ಕುಟುಂಬಗಳಿಗೆ ಸ್ವಯಂಸೇವಕರು ಹಂಚಿದರು. RSS ನ ಹಿತೈಷಿಗಳಾದ 123 ವೈದ್ಯರುಗಳ ತಂಡವು ಜಲಾವೃತ ಪ್ರದೇಶಗಳಲ್ಲಿ ನಡೆಸಿದ 202 ವೈದ್ಯಕೀಯ ಶಿಬಿರಗಳ ಮೂಲಕ 23,242 ಜನರು ಶುಶ್ರೂಷೆ ಪಡೆದರು.

ಗುಜರಾತಿನ ಈ ಭೀಕರ ಪ್ರವಾಹದ ಪರಿಣಾಮಗಳು ಅತ್ಯಂತ ದುಃಖದಾಯಕವಾಗಿದ್ದವು. ಗುಜರಾತಿನ ಉತ್ತರಭಾಗದ ಬನಾಸ್ಕಾಂತಾ ಜಿಲ್ಲೆಯ ಧಾನೇರ, ದಾಂತೀವಾಡಾ, ಅಮೀರಗಢ, ಡೀಸಾ, ಲಾಖನಿಗಳಲ್ಲೇ ಒಂದು ಲಕ್ಷಕ್ಕೂ ಅಧಿಕ ಜಾನುವಾರು ಮತ್ತು ನೂರಕ್ಕೂ ಹೆಚ್ಚು ಮನುಷ್ಯರು ಮಲಗಿದಲ್ಲೇ ಸಾವಿಗೆ ತುತ್ತಾದರು. ಅಸುನೀಗಿದ ಜನರಲ್ಲಿ ಬಹುತೇಕರು ಸ್ವಯಂಸೇವಕರ ಎಚ್ಚರಿಕೆಯನ್ನು ನಿರ್ಲಕ್ಷಿಸಿದವರು ಅಥವಾ ಮೈಕ್ ಘೋಷಣೆ ತಲುಪದ ಪ್ರದೇಶಗಳ ನಿವಾಸಿಗಳಾಗಿದ್ದವರು. ಕಾಂಕರೇಜ ತಾಲೂಕಿನ ಖಾರಿಯಾ ಗ್ರಾಮದಲ್ಲಂತೂ ಒಂದೇ ಕುಟುಂಬದ 17 ಜನರನ್ನು ನಿದ್ದೆಯಲ್ಲೇ ನೀರು ನುಂಗಿಹಾಕಿತ್ತು. ಪ್ರವಾಹವಿಳಿದ ಬಳಿಕ ಆ ಪಾರ್ಥಿವ ಶರೀರಗಳ ಅಂತಿಮಸಂಸ್ಕಾರದ ವೇಳೆ ದುಃಖತಪ್ತ ಬಂಧುಗಳ ಸಂಗಡ ಕೆಲ ತರುಣ ಸ್ವಯಂಸೇವಕರೂ ಕಣ್ಣೀರ್ಗರೆಯುತ್ತಿದ್ದ ದೃಶ್ಯ ಕರುಳು ಕಿವುಚುವಂತಿತ್ತು.

ನೀರಿನಲ್ಲಿ ಸಿಲುಕಿದ್ದ ಜನರನ್ನು ಸುರಕ್ಷಿತ ನೆಲೆಗಳಿಗೆ ತಲುಪಿಸುವುದು ಸರಕಾರದ ಮುಂದಿದ್ದ ದೊಡ್ಡ ಸವಾಲಾಗಿತ್ತು. ಸೇನೆಯ ತುಕಡಿಗಳು ತಲುಪುವ ಮೊದಲೇ ಸ್ವಯಂಸೇವಕರು ಹಗ್ಗದ ಸಹಾಯದಿಂದ ಸಂತ್ರಸ್ತರನ್ನು ನೀರಿನಿಂದ ಮೇಲೆತ್ತುವ ಕೆಲಸ ಆರಂಭಿಸಿದ್ದರು. NDRFನ ಪಡೆಯ ರಕ್ಷಣಾ ಹಾಗೂ ಪರಿಹಾರ ಕಾರ್ಯಗಳಲ್ಲಿ ಸ್ವಯಂಸೇವಕರು ಸಂಪೂರ್ಣ ಸಹಕಾರ ನೀಡಿದ್ದರು. ಆ ತರುಣ ಸ್ವಯಂಸೇವಕರು ತಮಗೆ ಎದುರಾದ ಎಲ್ಲ ಕಷ್ಟಗಳನ್ನೂ ಬದಿಗಿರಿಸಿ, ಸಂಘದ ಶಾಖೆಯು ಕಲಿಸಿದ ಮಾನವಸೇವೆಯ ಮಂತ್ರವನ್ನು ಚಾಚೂತಪ್ಪದೆ ಪಾಲಿಸಿ ತೋರಿಸಿದರು.

**ಸಂಪರ್ಕ– ನಟೂ ಭಾಯೀ – 9429259143**

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯಕೃಷ್ಣ ಹೆಚ್ ವಿ, ಕಿರಣ್‌ಕುಮಾರ್ ವಿವೇಕವಂಶಿ, ಗಿರಿಧರ ಉದ್ಯಾವರ

## 91 ಸಾವಿರ ಸರ್ಕಾರಿ ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಸೌರ ಫಲಕ ಅಳವಡಿಕೆ: ಕೇಂದ್ರ



1800 ಮೆಗಾವ್ಯಾಟ್‌ಗೂ ಹೆಚ್ಚು ಸಾಮರ್ಥ್ಯವಿರುವ 91 ಸಾವಿರಕ್ಕೂ ಹೆಚ್ಚು ಸರ್ಕಾರಿ ಕಟ್ಟಡಗಳ ಖಾಲಿ ಮೇಲ್ಛಾವಣಿಗಳ ಮೇಲೆ ಸೌರ ಫಲಕಗಳನ್ನು ಅಳವಡಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ. ಹೊಸ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಶ್ರೀಪಾದ ಯಸ್ಸೊ ನಾಯಕ್ ರಾಜ್ಯಸಭೆಯಲ್ಲಿ ಲಿಖಿತ ಉತ್ತರದಲ್ಲಿ ಈ ವಿಷಯ ತಿಳಿಸಿದ್ದು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 91 ಸಾವಿರಕ್ಕೂ ಹೆಚ್ಚು ಸರ್ಕಾರಿ ಕಟ್ಟಡಗಳ ಮೇಲೆ ಸೌರ ಫಲಕಗಳನ್ನು ಅಳವಡಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

## AB-PMJAY ವಿಸ್ತರಿಸಿದ ಮೊದಲ ವರ್ಷದಲ್ಲಿ ರೂ.1,471 ಕೋಟಿ ಮೌಲ್ಯದ 700,000 ಚಿಕಿತ್ಸೆಗೆ ಅನುವು

ಒಂದು ವರ್ಷದ ಹಿಂದೆ 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರನ್ನು ಸೇರಿಸಲು ವಿಸ್ತರಿಸಲಾದ ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ (AB-PMJAY), ಅಕ್ಟೋಬರ್ 2025ರ ವೇಳೆಗೆ 1,471 ಕೋಟಿ ರೂಪಾಯಿ ಮೌಲ್ಯದ 700,000 ಕ್ಕೂ ಹೆಚ್ಚು ಚಿಕಿತ್ಸೆಗಳಿಗೆ ಅನುವು ನೀಡಿದೆ.




# ಸಾಲುದ್ದದ ಸುದ್ದಿಗಳು

ಇದು ವಯಸ್ಸಾದ ಫಲಾನುಭವಿಗಳನ್ನು ಹಾನಿಕಾರಕ ಆರೋಗ್ಯ ವೆಚ್ಚಗಳಿಂದ ರಕ್ಷಿಸಿ ಅವರ ಹಣವನ್ನು ಉಳಿಸಿದೆ ಅಥವಾ ಅನಗತ್ಯ ಸಾಲಗಳಿಂದ ಅವರನ್ನು ರಕ್ಷಿಸಿದೆ. PMJAY ಕಾರ್ಯಗತಗೊಳಿಸುವ ಸಂಸ್ಥೆಯಾದ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ (NHA) ಅಧಿಕಾರಿಗಳ ಪ್ರಕಾರ, ಅಕ್ಟೋಬರ್ 2024ರಲ್ಲಿ ವಿಸ್ತರಿಸಲಾದ ಈ ಯೋಜನೆಯು 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಜನರ 9.26 ಮಿಲಿಯನ್‌ಗಿಂತಲೂ ಹೆಚ್ಚು ಆಸ್ಪತ್ರೆ ದಾಖಲಾತಿಗಳನ್ನು ದಾಖಲಿಸಿದೆ. ಎಲ್ಲಾ ಅರ್ಹ ಫಲಾನುಭವಿಗಳು ಈ ಯೋಜನೆಗೆ ನೋಂದಾಯಿಸಿಕೊಳ್ಳಬಹುದಾದರೂ, PMJAY ಅಡಿಯಲ್ಲಿ ಈಗಾಗಲೇ ಒಳಗೊಳ್ಳಲ್ಪಟ್ಟ ಕುಟುಂಬಗಳ ಹಿರಿಯ ಸದಸ್ಯರು ಕುಟುಂಬಕ್ಕೆ ನೀಡಲಾಗುವ ರೂ 5 ಲಕ್ಷಕ್ಕಿಂತ ರೂ 5 ಲಕ್ಷದ ಹೆಚ್ಚುವರಿ ಟಾಪ್-ಅಪ್ ಕವರ್ ಪಡೆಯಲು ಮರು-ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ..

## ಮೊಬೈಲ್‌ಗಳಲ್ಲಿ ಸಂಚಾರ ಸಾಥಿ ಸ್ಥಾಪಿಸಲು ಕೇಂದ್ರ ನಿರ್ದೇಶನ

ಭಾರತದಲ್ಲಿ ತಯಾರಾಗುವ ಅಥವಾ ಆಮದು ಮಾಡಿಕೊಳ್ಳುವ ಎಲ್ಲಾ ಹ್ಯಾಂಡ್‌ಸೆಟ್‌ಗಳಲ್ಲಿ ಸಂಚಾರ್ ಸಾಥಿ ಮೊಬೈಲ್ ಅಪ್ಲಿಕೇಶನ್ ಅನ್ನು ಸ್ಥಾಪಿಸಲು ಮೊಬೈಲ್ ಫೋನ್ ತಯಾರಕರಿಗೆ ಕೇಂದ್ರವು ನಿರ್ದೇಶನ ನೀಡಿದೆ. ಸೈಬರ್ ವಂಚನೆಯಿಂದ ನಾಗರಿಕರನ್ನು ರಕ್ಷಿಸುವ ಮತ್ತು ಕಳೆದುಹೋದ ಫೋನ್‌ಗಳನ್ನು ಮರುಪಡೆಯಲು ಸಹಾಯ ಮಾಡುವ ಗುರಿಯಿಂದ ಸರ್ಕಾರ ಈ ಕ್ರಮ ಹೊಂದಿದೆ ಎಂದು ಸರ್ಕಾರ ಹೇಳಿದೆ. ಕೇಂದ್ರದ ಡಿಜಿಟಲ್ ಸುರಕ್ಷತಾ ಉಪಕ್ರಮವಾದ ಸಂಚಾರ್ ಸಾಥಿ ಮೊಬೈಲ್ ಅಪ್ಲಿಕೇಶನ್ ಮತ್ತು ಅದರ ವೆಬ್‌ಪೋರ್ಟಲ್ ಮೂಲಕ ಬಹು ನಾಗರಿಕ ಕೇಂದ್ರಿತ ಸೇವೆಗಳನ್ನು ಒದಗಿಸುತ್ತದೆ. ಈ ಸೇವೆಗಳಲ್ಲಿ ಚಕ್ಷು ಸೇರಿದೆ, ಇದು ಫೋನ್ ಬಳಕೆದಾರರಿಗೆ ಶಂಕಿತ ಸೈಬರ್ ವಂಚನೆಯನ್ನು ವರದಿ ಮಾಡಲು ಸಹಾಯ ಮಾಡುತ್ತದೆ.




ಇದು ಸೈಬರ್ ಅಪರಾಧ, ಆರ್ಥಿಕ ವಂಚನೆಗಳು ಇತ್ಯಾದಿಗಳಿಗೆ ಟೆಲಿಕಾಂ ಸಂಪನ್ಮೂಲಗಳ ದುರುಪಯೋಗವನ್ನು ತಡೆಗಟ್ಟುವಲ್ಲಿ ದೂರಸಂಪರ್ಕ ಇಲಾಖೆಗೆ ಸಹಾಯ ಮಾಡುತ್ತದೆ.

## 2024-25 ರಲ್ಲಿ 1.54 ಲಕ್ಷ ಕೋಟಿ ರೂ ರಕ್ಷಣಾ ಉತ್ಪಾದನೆ ದಾಖಲಿಸಿದ ಭಾರತ



2024ರಲ್ಲಿ ಭಾರತವು 1 ಲಕ್ಷ 54 ಸಾವಿರ ಕೋಟಿ ರೂಪಾಯಿಗಳ ಅತ್ಯಧಿಕ ರಕ್ಷಣಾ ಉತ್ಪಾದನೆಯನ್ನು ದಾಖಲಿಸಿದೆ. 2014ರಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳಿಗಿಂತ ಕಡಿಮೆಯಿದ್ದ ರಕ್ಷಣಾ ರಫ್ತು 2024-25ರಲ್ಲಿ ದಾಖಲೆಯ 23,622 ಕೋಟಿ ರೂಪಾಯಿಗಳನ್ನು ತಲುಪಿದೆ. ಕಳೆದ ದಶಕದಲ್ಲಿ ದೇಶದ ಮಿಲಿಟರಿ ಕೈಗಾರಿಕಾ ನೆಲೆಗೆ ವಿಸ್ತರಿಸಿದ ಬೃಹತ್ ಹಂಚಿಕೆಗಳು ಮತ್ತು ನೀತಿ ಮಟ್ಟದ ಬೆಂಬಲದ ರೂಪದಲ್ಲಿ ಸರ್ಕಾರದ ನಿರಂತರ ಬೆಂಬಲದ ಪರಿಣಾಮವೇ ರಕ್ಷಣಾ ಉತ್ಪಾದನೆಯಲ್ಲಿನ ಏರಿಕೆಯಾಗಿದೆ. ರಕ್ಷಣಾ ಬಜೆಟ್ 2013-14 ರಲ್ಲಿ 2 ಲಕ್ಷ 53 ಸಾವಿರ ಕೋಟಿ ರೂಪಾಯಿಗಳಿಂದ 2025-26 ರಲ್ಲಿ 6 ಲಕ್ಷ 81 ಸಾವಿರ ಕೋಟಿ ರೂಪಾಯಿಗಳಿಗೆ ಏರಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ, ಇದು ರಾಷ್ಟ್ರದ ಮಿಲಿಟರಿ ಮೂಲಸೌಕರ್ಯವನ್ನು ಬಲಪಡಿಸುವ ಸರ್ಕಾರದ ಬದ್ಧತೆಯನ್ನು ಒತ್ತಿಹೇಳುತ್ತದೆ.

1ನೇ ಪುಟದಿಂದ...

# ಪರಿಸರಸ್ನೇಹಿ ಜೀವನಶೈಲಿಯ ಮೂಲಕ ಪರಿಸರ ಸಂರಕ್ಷಣೆ ಸಾಧ್ಯ

### ಪರಿಸರ ಸ್ನೇಹಿ ಜೀವನಶೈಲಿ

ಹವಾಮಾನಕ್ಕೆ ಅನುಗುಣವಾಗಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವಂತೆಯೇ ನಮ್ಮ ದೈನಂದಿನ ಜೀವನದಲ್ಲಿ ಪ್ರಕೃತಿಯೊಂದಿಗೂ ಸಮತೋಲನವನ್ನು ಕಾಪಾಡಿಕೊಳ್ಳಬೇಕು. ಪ್ರಕೃತಿ ಮತ್ತು ಮನುಷ್ಯನ ನಡುವೆ ಆಳವಾದ ಸಂಬಂಧವಿದೆ. ಉದಾಹರಣೆಗೆ ಪ್ರಕೃತಿಯಲ್ಲಿ ಅಗ್ನಿ ಮತ್ತು ಗಾಳಿ, ಗಾಳಿ ಮತ್ತು ಆಕಾಶ, ಆಕಾಶ ಮತ್ತು ಭೂಮಿ ಸಂಬಂಧ ಹೊಂದಿರುವಂತೆಯೇ ಮನುಷ್ಯ ಮತ್ತು ಪ್ರಕೃತಿಯೂ ಸಹ ಒಂದಕ್ಕೊಂದು ಬೆಸೆದುಕೊಂಡಿದೆ. ಈ ಸೃಷ್ಟಿಚಕ್ರವನ್ನು ಹಾಳುಮಾಡಲು ಬಿಡಬಾರದು.

### ನೀರಿನ ಮಿತ ಬಳಕೆ

ತಜ್ಞರ ಪ್ರಕಾರ, 2050ರ ವೇಳೆಗೆ ಭಾರತದ 8-10 ರಾಜ್ಯಗಳ ಸುಮಾರು 150 ರಿಂದ 200 ಜಿಲ್ಲೆಗಳಲ್ಲಿ ನೀರಿನ ಕೊರತೆ ಹೆಚ್ಚಾಗಲಿದೆ. 1947ರವರೆಗೆ ನಮ್ಮ ದೇಶದಲ್ಲಿ ಪ್ರತಿ ವ್ಯಕ್ತಿಗೆ ಸುಮಾರು 6000 ಘನ ಮೀಟರ್ ನೀರು ಲಭ್ಯವಿತ್ತು, ಆದರೆ 2000ದಲ್ಲಿ ಮಾಡಿದ ಅಂದಾಜಿನ ಪ್ರಕಾರ ಇದು ತಲಾ ಸುಮಾರು 2000 ಘನ ಮೀಟರ್‌ಗೆ ಇಳಿದಿದೆ. 1947ರಿಂದ 2000ದವರೆಗೆ ಹೀಗಾದರೆ, 2050ರ ವೇಳೆಗೆ ಏನಾಗಬಹುದು! ಇದು ತಲಾ ಸುಮಾರು 1200 ಘನ ಮೀಟರ್‌ಗೆ ಇಳಿಯುತ್ತದೆ ಎಂದು ಅಂದಾಜಿಸಲಾಗುತ್ತಿದೆ. ಜನಸಂಖ್ಯೆ ಹೆಚ್ಚುತ್ತಿದೆ, ಆದರೆ ನೀರಿನ ಮೂಲಗಳು ಹೆಚ್ಚಾಗುತ್ತಿಲ್ಲ. ಆದ್ದರಿಂದ, ಈ ಸಮಸ್ಯೆಯ ಪರಿಹಾರಕ್ಕಾಗಿ ನಾವು ಯೋಚಿಸಬೇಕಿದೆ. ಮುಂದಿನ ವಿಶ್ವಯುದ್ಧವು ನೀರಿನ ಕಾರಣದಿಂದ ನಡೆಯಲಿದೆ ಎಂದು ಪ್ರಪಂಚದ ಅನೇಕ ಚಿಂತಕರು ಹೇಳಿದ್ದಾರೆ. ಆದ್ದರಿಂದ, ನೀರನ್ನು ಹನಿ ಹನಿಯಾಗಿ ರಕ್ಷಿಸುವುದು ಅವಶ್ಯಕ ಮತ್ತು ನೀರಿನ



ಮೂಲಗಳ ಸಂಖ್ಯೆಯೂ ಹೆಚ್ಚಾಗಬೇಕು. ನಗರೀಕರಣದ ಪ್ರಕ್ರಿಯೆಯು ಹೆಚ್ಚು ವ್ಯಾಪಕವಾಗುತ್ತಿರುವುದರಿಂದ ಕೆರೆಗಳು ಮಾಯವಾಗುತ್ತಿವೆ. ಕೆರೆಗಳ ಜಾಗದಲ್ಲಿ ಬಸ್ ನಿಲ್ದಾಣಗಳಂತಹ ಅನೇಕ ರೀತಿಯ ಸಾರ್ವಜನಿಕ ವ್ಯವಸ್ಥೆಗಳಿಗೆ ಸಂಬಂಧಿಸಿದ ನಿರ್ಮಾಣಗಳನ್ನು ಮಾಡಲಾಗುತ್ತಿದೆ. ಇರುವ ಕೆರೆಗಳು ನಿರಂತರವಾಗಿ ಒಣಗುತ್ತಿವೆ ಮತ್ತು ಆ ಪ್ರಮಾಣದಲ್ಲಿ ಹೊಸ ಕೆರೆಗಳ ನಿರ್ಮಾಣವಾಗುತ್ತಿಲ್ಲ. ಹೀಗಿರುವ ಕೆರೆಗಳೂ ಒಣಗಿಹೋದರೆ, ಆಗ ಎಂತಹ ಭಯಾನಕ ಪರಿಸ್ಥಿತಿ ಉಂಟಾಗಬಹುದು ಎಂಬುದನ್ನು ಯೋಚಿಸಿ! ಭೂಮಿಯ ಮೇಲಿನ ಒಟ್ಟು ನೀರಿನ ಪ್ರಮಾಣದಲ್ಲಿ ಕೇವಲ 4 ಪ್ರತಿಶತದಷ್ಟು ಮಾತ್ರ ಶುದ್ಧವಾಗಿದೆ ಅಥವಾ ಕುಡಿಯಲು ಯೋಗ್ಯವಾಗಿದೆ ಎಂದು ನಮಗೆ ತಿಳಿದಿದೆಯಲ್ಲವೇ?

### ನಮ್ಮ ಉಪಕ್ರಮಗಳು ಅವಶ್ಯಕ

ಈ ಎಲ್ಲಾ ಪರಿಸ್ಥಿತಿಗಳಲ್ಲಿ, ನಾವು ಭಾರತದ ಪರಿಸ್ಥಿತಿಯನ್ನು ಮುಂದಿಟ್ಟುಕೊಂಡು ಯೋಚಿಸಿದಾಗ ಗಂಭೀರ ಚಿಂತನೆಗಳು ನಮ್ಮಲ್ಲಿ ಮೂಡುತ್ತದೆ. ಸುಮ್ಮನೆ ಕುಳಿತುಕೊಳ್ಳುವುದರಿಂದ ಯಾವ ಬದಲಾವಣೆಯೂ ಸಾಧ್ಯವಿಲ್ಲ, ಬದಲಾಗಿ ನಾವು ನಮ್ಮ ಜೀವನಶೈಲಿಯ ಬಗ್ಗೆ ಆಲೋಚಿಸಬೇಕು. ಕೆಲವು ವಸ್ತುಗಳನ್ನು ಮರುಬಳಕೆ ಮಾಡುವುದು, ಪ್ಲಾಸ್ಟಿಕ್ ಬಳಕೆಯನ್ನು ಹಂತಹಂತವಾಗಿ ಕಡಿಮೆ ಮಾಡುತ್ತಾ ಹೋಗುವುದು. ಎಲ್ಲಿ ಸಾಧ್ಯವೋ ಅಲ್ಲಿ ಪ್ಲಾಸ್ಟಿಕ್ ಬಳಸದಿರುವುದು ಪರಿಹಾರೋಪಾಯಗಳಾಗಿವೆ. ಬಟ್ಟೆ ಮತ್ತು ಕಾಗದವನ್ನು ಪದೇ ಪದೇ ಬಳಸಬಹುದು.

ಬುದ್ಧನ ಶಿಷ್ಯರಲ್ಲಿ ಪ್ರಸಿದ್ಧನಾದ ಆನಂದನೆಂಬ ಶಿಷ್ಯನ ಒಂದು ಕಥೆಯೊಂದಿದೆ. ಒಮ್ಮೆ ಆನಂದನು ಬೌದ್ಧ ಭಿಕ್ಷುಗಳಿಗಾಗಿ ಬಟ್ಟೆ ಕೇಳಲು ಶ್ರೇಷ್ಠಿಯ (ವ್ಯಾಪಾರಿ) ಬಳಿಗೆ ಹೋದನು. ವ್ಯಾಪಾರಿಯು 'ಹಿಂದಿನ ಬಾರಿ ತೆಗೆದುಕೊಂಡು ಹೋಗಿದ್ದ ಬಟ್ಟೆಗಳನ್ನು ಏನು ಮಾಡಿದಿರಿ?' ಎಂದು ಕೇಳಿದ. ಆನಂದನು 'ಆ ಬಟ್ಟೆಗಳನ್ನು ನಾವು ಉಟ್ಟೆವು ಮತ್ತು ಅವು ಹರಿದುಹೋದವು' ಎಂದು ಉತ್ತರಿಸಿದನು. ವ್ಯಾಪಾರಿಯು ಎರಡನೇ ಪ್ರಶ್ನೆಯನ್ನು ಕೇಳಿದ - 'ಬಟ್ಟೆ ಹರಿದ ನಂತರ ಏನು ಮಾಡಿದಿರಿ?'

'ನಾವು ಅದನ್ನು ದೇಹವನ್ನು ಒರೆಸಲು ಬಳಸಿಕೊಂಡೆವು' ಎಂದುತ್ತರಿಸಿದ ಆನಂದ.



'ಆಮೇಲೆ ಏನಾಯಿತು?'

'ಮತ್ತೆ ಹರಿದುಹೋಯಿತು.'

'ಮತ್ತೆ ಹರಿದ ನಂತರ ಏನು ಮಾಡಿದಿರಿ?'

'ನಾವು ಅದನ್ನು ಅಡುಗೆಮನೆ ಇತ್ಯಾದಿ ಸ್ಥಳಗಳಲ್ಲಿ ಚೆಲ್ಲಿದ ನೀರನ್ನು ಒರೆಸಲು, ನೆಲ ಒರೆಸುವ ಬಟ್ಟೆಯಾಗಿ ಬಳಸಿಕೊಂಡೆವು'.

ಇದನ್ನು ಕೇಳಿದ ಶ್ರೇಷ್ಠಿಗೆ ಭಿಕ್ಷುಗಳು ಬಟ್ಟೆಯ ಪ್ರತಿಯೊಂದು ದಾರವನ್ನೂ ಬಳಸಿದ್ದಾರೆ ಎಂಬುದು ಅರ್ಥವಾಯಿತು. ಅವನು ಸಂತೋಷಗೊಂಡನು ಮತ್ತು ಬೌದ್ಧ ಭಿಕ್ಷುಗಳಿಗೆ ಅವರಿಗೆ ಬೇಕಾದಷ್ಟು ಬಟ್ಟೆಗಳನ್ನು ಕೊಡಲು ನಿರ್ದೇಶಿಸಿದನು. ಪ್ರಕೃತಿಯ ಶೋಷಣೆ ಮಾಡದಂತೆ ಮತ್ತು ಅದನ್ನು ಸಂರಕ್ಷಿಸಲು ನಾವು ನಮ್ಮ ಜೀವನದಲ್ಲಿ ಬಳಸುವ ವಸ್ತುವನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಬೇಕು ಎನ್ನುವುದೇ ಈ ಕತೆಯ ಸಂದೇಶ. ಆದ್ದರಿಂದ ಕೆಲವು ವಸ್ತುಗಳನ್ನು ಅದರ ಗರಿಷ್ಠ ಬಳಕೆಯ ಚಕ್ರ ಪೂರ್ಣಗೊಳ್ಳುವಂತೆ ಉಪಯೋಗಿಸಬೇಕು.

ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯನ್ನೂ ಒಂದೊಂದು ಸಸಿಯೊಂದಿಗೆ ಜೋಡಿಸಿ, ಪ್ರತಿದಿನ ಶಾಲೆ ಮುಗಿಸಿ ಹೋಗುವಾಗ ತಮ್ಮ ಸಸಿಯ ಬಳಿ ಹೋಗಿ ಅದರ ಆರೈಕೆ ಮಾಡಬೇಕು ಎಂದು ಅವರಲ್ಲಿ ವಿನಂತಿಸಬಹುದು. ಇದೇ ರೀತಿಯ ಪ್ರಯತ್ನಗಳನ್ನು ಮಾಡಿ ಜನರು ಮರುಭೂಮಿಯಲ್ಲಿ ಕಾಡುಗಳನ್ನು ಸೃಷ್ಟಿಸಿದ್ದಾರೆ.

ಸ್ಥಳೀಯ ಮಣ್ಣು, ಸಾವಯವ ಗೊಬ್ಬರಗಳ ಮಿಶ್ರಣ ಮಾಡಿ ಸೀಡ್‌ಬಾಲ್ ಬಳಕೆಯನ್ನು ಉತ್ತೇಜಿಸುವುದು - ಪ್ರಕೃತಿ ಮತ್ತು ಜಲ ಸಂರಕ್ಷಣೆಯ ದೃಷ್ಟಿಯಿಂದ ಹೆಚ್ಚು ಉಪಯುಕ್ತ.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.vskkarnataka.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 10th NOVEMBER 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY KANNADA 15-12-2025



## ವೃತ್ತಿ ಶಿಕ್ಷಣದಲ್ಲಿ ತಮಿಳು, ಕನ್ನಡ, ಮಲಯಾಳಂ, ತೆಲುಗನ್ನು ಸೇರಿಸಿದ ಯುಪಿ

ಉತ್ತರಪ್ರದೇಶ ರಾಜ್ಯ ಸರ್ಕಾರವು ತನ್ನ ವೃತ್ತಿಪರ ಶಿಕ್ಷಣದಲ್ಲಿ ತಮಿಳು, ಕನ್ನಡ, ಮಲಯಾಳಂ, ತೆಲುಗು, ಮರಾಠಿ ಮತ್ತು ಬಂಗಾಳಿ ಭಾಷೆಗಳನ್ನು ಸೇರಿಸಿದೆ ಎಂದು ವಾರಣಾಸಿಯಲ್ಲಿ ನಡೆದ ಕಾಶಿ ತಮಿಳು ಸಂಗಮಮ್ 4.0 ಉದ್ಘಾಟನಾ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹೇಳಿದ್ದಾರೆ. ಕಾಶಿ ತಮಿಳು ಸಂಗಮವನ್ನು 'ಏಕ ಭಾರತ ಶ್ರೇಷ್ಠ ಭಾರತ-ಎಂಬ ಸಂಕಲ್ಪವನ್ನು ಬಲಪಡಿಸುವ ಮತ್ತು ಜೀವಂತಗೊಳಿಸುವ ಒಂದು ಹೆಜ್ಜೆ ಎಂದು ಆದಿತ್ಯನಾಥ್ ಬಣ್ಣಿಸಿದ್ದಾರೆ. ಈ ಕಾರ್ಯಕ್ರಮವು ಭಾರತದ ಭವಿಷ್ಯದಲ್ಲಿ ಹೂಡಿಕೆ ಮಾಡಿದಂತೆ ಎಂದು ಹೇಳಿದ ಆದಿತ್ಯನಾಥ್, ಪ್ರಧಾನಮಂತ್ರಿಯವರ ಮಾರ್ಗದರ್ಶನದಲ್ಲಿ ಕಾಶಿ ತಮಿಳು ಸಂಗಮವು ಭಾರತದ ಸಾಂಸ್ಕೃತಿಕ ಪುನರುಜ್ಜೀವನದ ಸಂಕೇತವಾಗಿದೆ. ಶಿವನು ಕಾಶಿ ಮತ್ತು ತಮಿಳು ಸಂಪ್ರದಾಯದ ನಡುವಿನ ಪ್ರಾಚೀನ ಸಂಬಂಧದ ಕೇಂದ್ರದಲ್ಲಿದ್ದಾನೆ ಮತ್ತು ಈ ಸಂಪರ್ಕವನ್ನು ಆದಿ ಶಂಕರಾಚಾರ್ಯರು ಭಾರತದ ನಾಲ್ಕು ಮೂಲೆಗಳಲ್ಲಿ ಪವಿತ್ರ ಪೀಠಗಳನ್ನು ಸ್ಥಾಪಿಸುವ ಮೂಲಕ ಮತ್ತಷ್ಟು ಹೆಚ್ಚಿಸಿದ್ದಾರೆ ಎಂದಿದ್ದಾರೆ. ಈ ಕಾರ್ಯಕ್ರಮವು ಉತ್ತರ ಮತ್ತು ದಕ್ಷಿಣ ಭಾರತದ ನಡುವಿನ ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ ಮತ್ತು ಆಧ್ಯಾತ್ಮಿಕ ಪಾಲುದಾರಿಕೆಯನ್ನು ಬಲಪಡಿಸುತ್ತಿದೆ, ಭಾರತದ ಉಜ್ವಲ ಭವಿಷ್ಯಕ್ಕೆ ಹೊಸ ಬಾಗಿಲುಗಳನ್ನು ತೆರೆಯುತ್ತಿದೆ ಎಂದು ಹೇಳಿದರು.

## 'ಆಪರೇಷನ್ ಸಾಗರ್ ಬಂಧು' ಮೂಲಕ ಶ್ರೀಲಂಕಾಗೆ ನೆರವು ನೀಡಿದ ಭಾರತ



ದಿತ್ವಾ ಚಂಡಮಾರುತದಿಂದ ಉಂಟಾದ ವಿನಾಶಕಾರಿ ಪ್ರವಾಹದಲ್ಲಿ ತತ್ತರಿಸಿರುವ ಶ್ರೀಲಂಕಾಕ್ಕೆ ಭಾರತೀಯ ವಾಯುಪಡೆ 21 ಟನ್ ಪರಿಹಾರ ಸಾಮಗ್ರಿಗಳನ್ನು, 80ಕ್ಕೂ ಹೆಚ್ಚು ಓಆಖಈ ಸಿಬ್ಬಂದಿ ಮತ್ತು ಎಂಟು ಟನ್ ಉಪಕರಣಗಳನ್ನು ವಿಮಾನದ ಮೂಲಕ ಸಾಗಿಸಿದೆ. ಬಿಕ್ಕಟ್ಟಿನ ಸಂದರ್ಭದಲ್ಲಿ ತನ್ನ ನೆರೆಯ ರಾಷ್ಟ್ರವನ್ನು ಬೆಂಬಲಿಸಲು ಭಾರತ ಪ್ರಾರಂಭಿಸಿದ ಆಪರೇಷನ್ ಸಾಗರ್ ಬಂಧುವಿನ ಭಾಗವಾಗಿ ಈ ನಿಯೋಜನೆ ಮಾಡಲಾಗಿದೆ. "ದಿತ್ವಾ ಚಂಡಮಾರುತದಿಂದ ಶ್ರೀಲಂಕಾದಾದ್ಯಂತ ಉಂಟಾದ ವಿನಾಶದ ನಂತರ, ಪರಿಹಾರ ಪ್ರಯತ್ನಗಳನ್ನು ಬಲಪಡಿಸಲು ಭಾರತವು ಆಪರೇಷನ್ ಸಾಗರ್ ಬಂಧುವನ್ನು ತ್ವರಿತವಾಗಿ ಪ್ರಾರಂಭಿಸಿತು" ಎಂದು IAF ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್‌ನಲ್ಲಿ ತಿಳಿಸಿದೆ. ಎರಡು ವಿಮಾನಗಳು, C–130 ಮತ್ತು IL-76, ಶುಕ್ರವಾರ ತಡರಾತ್ರಿ ಹಿಂಡನ್ ವಾಯುನೆಲೆಯಿಂದ 21 ಟನ್ ಅಗತ್ಯ ಪಡಿತರ, ನೈರ್ಮಲ್ಯ ಸರಬರಾಜು ಮತ್ತು ತುರ್ತು ಉಪಕರಣಗಳನ್ನು ಹೊತ್ತುಕೊಂಡು ಹೊರಟವು. C–130 ವಿಮಾನವು ಕೊಲಂಬೊದ ಬಂಡರನಾಯಕೆ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬೆಳಗಿನ ಜಾವ 1:30ರ ಸುಮಾರಿಗೆ ಇಳಿಯಿತು, ಅಲ್ಲಿ ಭಾರತೀಯ ಹೈಕಮಿಷನ್ ಮತ್ತು ಶ್ರೀಲಂಕಾ ವಾಯುಪಡೆಯ ಅಧಿಕಾರಿಗಳು ಅದನ್ನು ಸ್ವೀಕರಿಸಿದರು. "ನೆರೆಹೊರೆ ಮೊದಲು" ನೀತಿಗೆ ಭಾರತದ ಬದ್ಧತೆಯನ್ನು ಈ ನೆರವು ಪುನರುಚ್ಚರಿಸುತ್ತದೆ ಎಂದು ಐಎಎಫ್ ಹೇಳಿದೆ. "ಈ ಅಗತ್ಯದ ಸಮಯದಲ್ಲಿ ಭಾರತ ಶ್ರೀಲಂಕಾದೊಂದಿಗೆ ದೃಢವಾಗಿ ನಿಲ್ಲುತ್ತದೆ" ಎಂದು ಹೇಳಿದರು.

## ಆಧಾರ್ ಕಾರ್ಡ್ ಪೌರತ್ವದ ಸಂಪೂರ್ಣ ಪುರಾವೆಯಲ್ಲ: ಸುಪ್ರೀಂ

ಆಧಾರ್ ಕಾರ್ಡ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿರುವ ನುಸುಳುಕೋರರ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸುಪ್ರೀಂಕೋರ್ಟ್, ಆಧಾರ್ ಕಾರ್ಡ್ ಹೊಂದಿರುವ ನಾಗರಿಕರಲ್ಲದವರಿಗೂ ಮತದಾನದ ಹಕ್ಕು ನೀಡಬೇಕೇ ಎಂದು ಕೇಳಿದೆ. ಆಧಾರ್, ಸಾಮಾಜಿಕ ಕಲ್ಯಾಣ ಪ್ರಯೋಜನಗಳು ಎಲ್ಲರಿಗೂ ತಲುಪುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಆಧಾರ್ ಸ್ವಯಂಚಾಲಿತವಾಗಿ ಮತದಾನದ ಹಕ್ಕನ್ನು ನೀಡಬಾರದು ಎಂದು ನ್ಯಾಯಾಲಯ ಹೇಳಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಪೀಠವು ಹಲವಾರು ರಾಜ್ಯಗಳಲ್ಲಿ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ (SIR) ನಡೆಸುವ ಚುನಾವಣಾ ಆಯೋಗದ ಕ್ರಮದ ಸಿಂಧುತ್ವವನ್ನು ಪ್ರಶ್ನಿಸುವ ಅರ್ಜಿಗಳ ವಿಚಾರಣೆ ನಡೆಸುತ್ತಿದೆ. ಆಧಾರ್ ಕಾರ್ಡ್ "ಪೌರತ್ವದ ಸಂಪೂರ್ಣ ಪುರಾವೆಯನ್ನು ನೀಡುವುದಿಲ್ಲ" ಎಂದು ಪೀಠವು ಪುನರುಚ್ಚರಿಸಿದೆ. ಆಧಾರ್ ಕಾಯ್ದೆಯು ಪೌರತ್ವ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ಮತದಾರರ ಪಟ್ಟಿಯಲ್ಲಿ ಸೇರಿಸಲು ಕೋರಿ ಫಾರ್ಮ್ 6 ಅರ್ಜಿಯೊಂದಿಗೆ ಸಲ್ಲಿಸಲಾದ ದಾಖಲೆಗಳ ನಿಖರತೆಯನ್ನು ನಿರ್ಧರಿಸಲು ಚುನಾವಣಾ ಆಯೋಗಕ್ಕೆ ಅಧಿಕಾರವಿದೆ ಎಂದು ನ್ಯಾಯಾಲಯ ಹೇಳಿದೆ. ಚುನಾವಣಾ ಸಂಸ್ಥೆಯು "ಅಂಚೆ ಕಚೇರಿ" ಅಲ್ಲ ಎಂದಿದೆ. ತಮಿಳುನಾಡು, ಕೇರಳ ಮತ್ತು ಪಶ್ಚಿಮ ಬಂಗಾಳದಲ್ಲಿ SIR ಅನ್ನು ನಿರ್ದಿಷ್ಟವಾಗಿ ಪ್ರಶ್ನಿಸುವ ಅರ್ಜಿಗಳ ವಿಚಾರಣೆಗೆ ಸುಪ್ರೀಂಕೋರ್ಟ್ ವೇಳಾಪಟ್ಟಿಯನ್ನು ನಿಗದಿಪಡಿಸಿದೆ. ಡಿಸೆಂಬರ್ 1 ರೊಳಗೆ ಪ್ರತಿಕ್ರಿಯೆಗಳನ್ನು ಸಲ್ಲಿಸುವಂತೆ ಪೀಠವು ಚುನಾವಣಾ ಆಯೋಗವನ್ನು ಕೇಳಿದೆ.

## ಮೃತ ವ್ಯಕ್ತಿಗಳ 2 ಕೋಟಿಗೂ ಅಧಿಕ ಆಧಾರ್ ಸಂಖ್ಯೆ ನಿಷ್ಕ್ರಿಯ: UIDIA

ಆಧಾರ್ ಡೇಟಾಬೇಸ್‌ನ ನಿರಂತರ ನಿಖರತೆಯನ್ನು ಕಾಪಾಡಿಕೊಳ್ಳಲು ದೇಶಾದ್ಯಂತ ನಡೆಯುತ್ತಿರುವ ಪ್ರಯತ್ನದ ಭಾಗವಾಗಿ, ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (ಯುಐಡಿಎಐ) ಮೃತ ವ್ಯಕ್ತಿಗಳ ಎರಡು ಕೋಟಿಗೂ ಹೆಚ್ಚು ಆಧಾರ್ ಸಂಖ್ಯೆಗಳನ್ನು ನಿಷ್ಕ್ರಿಯಗೊಳಿಸಿದೆ. ಯುಐಡಿಎಐ ಈ ಡೇಟಾವನ್ನು ಭಾರತ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ರಿಜಿಸ್ಟ್ರಾರ್ ಜನರಲ್‌ನಿಂದ ಪಡೆದುಕೊಂಡಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ. ಯಾವುದೇ ಆಧಾರ್ ಸಂಖ್ಯೆಯನ್ನು ಇನ್ನೊಬ್ಬ ವ್ಯಕ್ತಿಗೆ ಎಂದಿಗೂ ಮರು ನಿಯೋಜಿಸಲಾಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ವ್ಯಕ್ತಿಯ ಮರಣದ ಸಂದರ್ಭದಲ್ಲಿ, ಸಂಭಾವ್ಯ ಗುರುತಿನ ವಂಚನೆ ಅಥವಾ ಯೋಜನೆಗಳ ಪ್ರಯೋಜನಗಳನ್ನು ಪಡೆಯಲು ಅಂತಹ ಆಧಾರ್ ಸಂಖ್ಯೆಯ ಅನಧಿಕೃತ ಬಳಕೆಯನ್ನು ತಡೆಯಲು ಮೃತರ ಆಧಾರ್ ಸಂಖ್ಯೆಯನ್ನು ನಿಷ್ಕ್ರಿಯಗೊಳಿಸುವುದು ಅತ್ಯಗತ್ಯ ಎಂದು ಸಚಿವಾಲಯ ಹೇಳಿದೆ. ಮರಣ ನೋಂದಣಿ ಅಧಿಕಾರಿಗಳಿಂದ ಅವರ ಮರಣ ಪ್ರಮಾಣಪತ್ರವನ್ನು ಪಡೆದ ನಂತರ ಕುಟುಂಬ ಸದಸ್ಯರ ಮರಣವನ್ನು ಆಧಾರ್ ಪೋರ್ಟಲ್‌ನಲ್ಲಿ ವರದಿ ಮಾಡುವಂತೆ ಯುಐಡಿಎಐ ಜನರನ್ನು ಕೇಳಿದೆ. ಪ್ರಸ್ತುತ ನಾಗರಿಕ ನೋಂದಣಿ ವ್ಯವಸ್ಥೆಯನ್ನು ಬಳಸುತ್ತಿರುವ 25 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನೋಂದಾಯಿಸಲಾದ ಸಾವುಗಳಿಗಾಗಿ ನನ್ನ ಆಧಾರ್ ಪೋರ್ಟಲ್‌ನಲ್ಲಿ 'ಕುಟುಂಬ ಸದಸ್ಯರ ಮರಣ ವರದಿ' ಎಂಬ ಸೌಲಭ್ಯವನ್ನು ಪ್ರಾಧಿಕಾರವು ಈ ವರ್ಷದ ಆರಂಭದಲ್ಲಿ ಪ್ರಾರಂಭಿಸಿತ್ತು

## ಒಂಬತ್ತು ಭಾಷೆಗಳಲ್ಲಿ ಸಂವಿಧಾನದ ಅನುವಾದಿತ ಆವೃತ್ತಿ ಬಿಡುಗಡೆ

ಸಂವಿಧಾನದ ದಿನದ ಹಿನ್ನಲೆಯಲ್ಲಿ ಸಂವಿಧಾನ ಸದನದ ಸೆಂಟ್ರಲ್ ಹಾಲ್‌ನಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂವಿಧಾನದ ಮುನ್ನುಡಿಯನ್ನು ಓದಿದರು. ಅಲ್ಲದೇ ಮಲಯಾಳಂ, ಮರಾಠಿ, ನೇಪಾಳಿ, ಪಂಜಾಬಿ, ಬೋಡೋ, ಕಾಶ್ಮೀರಿ, ತೆಲುಗು, ಒಡಿಯಾ ಮತ್ತು ಅಸ್ಸಾಮಿ ಸೇರಿದಂತೆ ಒಂಬತ್ತು ಭಾಷೆಗಳಲ್ಲಿ ಸಂವಿಧಾನದ ಅನುವಾದಿತ ಆವೃತ್ತಿಯನ್ನು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ರಾಷ್ಟ್ರಪತಿಗಳು, ಸಂವಿಧಾನವು ರಾಷ್ಟ್ರೀಯ ಗುರುತಿನ ಮೂಲಾಧಾರವಾಗಿದೆ ಮತ್ತು ವಸಾಹತುಶಾಹಿ ಮನಸ್ಥಿತಿಯನ್ನು ರಾಷ್ಟ್ರೀಯತಾವಾದಿ ದೃಷ್ಟಿಕೋನದಿಂದ ಬದಲಾಯಿಸಿ ರಾಷ್ಟ್ರವನ್ನು ಮುಂದಕ್ಕೆ ಕೊಂಡೊಯ್ಯಲು ಇದು ಮಾರ್ಗದರ್ಶಿ ಚೌಕಟ್ಟಾಗಿದೆ. ಜನರ ಆಕಾಂಕ್ಷೆಗಳನ್ನು ವ್ಯಕ್ತಪಡಿಸಲು ಸಂವಿಧಾನವು ಬಹಳ ಪರಿಣಾಮಕಾರಿ ಚೌಕಟ್ಟನ್ನು ಒದಗಿಸುತ್ತದೆ ಎಂದು ಹೇಳಿದರು.

ಭಾರತೀಯ ಸಂಸತ್ತು ಪ್ರಪಂಚದಾದ್ಯಂತದ ಅನೇಕ ದೇಶಗಳಿಗೆ ಉದಾಹರಣೆಯಾಗಿ ನಿಂತಿದೆ. ಕಳೆದ ದಶಕದಲ್ಲಿ, ಜನರ ಆಕಾಂಕ್ಷೆಗಳನ್ನು ಹೇಗೆ ಪೂರೈಸಬೇಕೆಂದು ಸಂಸತ್ತು ಪ್ರದರ್ಶಿಸಿದೆ. ಸಂವಿಧಾನದ ಮೂಲಕ ಜನರ ಸಾಮೂಹಿಕ ಮತ್ತು ವೈಯಕ್ತಿಕ ಘನತೆಯನ್ನು ರಕ್ಷಿಸಲಾಗಿದೆ ಎಂದು ಸಂವಿಧಾನ ರಚನೆಕಾರರು ಖಚಿತಪಡಿಸಿಕೊಳ್ಳಬೇಕೆಂದು ಅವರು ಒತ್ತಿ ಹೇಳಿದರು. ಈ ಸಂದರ್ಭದಲ್ಲಿ ಮಾತನಾಡಿದ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು, ಸಂವಿಧಾನವು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಲಕ್ಷಾಂತರ ದೇಶವಾಸಿಗಳ ಸಾಮೂಹಿಕ ಬುದ್ಧಿವಂತಿಕೆ, ತ್ಯಾಗ ಮತ್ತು ಕನಸುಗಳನ್ನು ಸಾಕಾರಗೊಳಿಸುತ್ತದೆ. ಮಹಾನ್ ವಿದ್ವಾಂಸರು, ಕರಡು ಸಮಿತಿ ಮತ್ತು ಸಾಂವಿಧಾನಿಕ ಸಭೆಯ ಸದಸ್ಯರು ಕೋಟ್ಯಂತರ ಭಾರತೀಯರ ಆಶಯಗಳು ಮತ್ತು ಆಕಾಂಕ್ಷೆಗಳನ್ನು ಈಡೇರಿಸಲು ಒಳನೋಟವುಳ್ಳ ಆಲೋಚನೆಗಳನ್ನು ನೀಡಿದ್ದಾರೆ. ಸಂವಿಧಾನವು ಬುದ್ಧಿಶಕ್ತಿ ಮತ್ತು ಅನುಭವ, ತ್ಯಾಗ, ಭರವಸೆ ಮತ್ತು ಆಕಾಂಕ್ಷೆಗಳಿಂದ ಹುಟ್ಟಿಕೊಂಡಿದೆ ಎಂದರು.

## ಭಾರತದ 53ನೇ ಸಿಜೆಐ ಆಗಿ ನ್ಯಾಯಮೂರ್ತಿ ಸೂರ್ಯಕಾಂತ್ ಪ್ರಮಾಣವಚನ



ನ್ಯಾಯಮೂರ್ತಿ ಸೂರ್ಯಕಾಂತ್ ಸೋಮವಾರ ಭಾರತದ 53ನೇ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು, ಇದು ದೇಶದ ಅತ್ಯುನ್ನತ ನ್ಯಾಯಾಂಗ ಕಚೇರಿಯಲ್ಲಿ ಅವರ ಸುಮಾರು 15 ತಿಂಗಳ ಅಧಿಕಾರಾವಧಿಯ ಆರಂಭವನ್ನು ಸೂಚಿಸುತ್ತದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಮತ್ತು ಇತರ ಗಣ್ಯರ ಸಮ್ಮುಖದಲ್ಲಿ ನ್ಯಾಯಮೂರ್ತಿ ಸೂರ್ಯಕಾಂತ್ ಅವರಿಗೆ ಪ್ರಮಾಣ ವಚನ ಬೋಧಿಸಿದರು. ನ್ಯಾಯಮೂರ್ತಿ ಭೂಷಣ್ ಆರ್ ಗವಾಯಿ ಅವರ ಉತ್ತರಾಧಿಕಾರಿಯಾದ ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಮಾಜಿ ಮುಖ್ಯ ನ್ಯಾಯಮೂರ್ತಿಗಳ ಶಿಫಾರಸಿನ ಮೇರೆಗೆ ಸಂವಿಧಾನದ 124 ನೇ ವಿಧಿಯ ಷರತ್ತು (2) ರಿಂದ ನೀಡಲಾದ ಅಧಿಕಾರವನ್ನು ಚಲಾಯಿಸುವ ಮೂಲಕ ಭಾರತದ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲಾಯಿತು.

## ಇನ್ನುಮುಂದೆ ಪಠ್ಯಗಳಲ್ಲಿ ಅಕ್ಬರ್ ಮತ್ತು ಟಿಪ್ಪುವನ್ನು 'ದಿ ಗ್ರೇಟ್' ಎಂದು ಉಲ್ಲೇಖಿಸುವಂತಿಲ್ಲ

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಇತಿಹಾಸ ಪಠ್ಯಪುಸ್ತಕಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ಪರಿಚಯಿಸಲಾಗಿದ್ದು, ಇದರಲ್ಲಿ ಮೊಘಲ್ ಚಕ್ರವರ್ತಿ ಅಕ್ಬರ್ ಮತ್ತು ಮೈಸೂರು ದೊರೆ ಟಿಪ್ಪು ಸುಲ್ತಾನರನ್ನು ಇನ್ನು ಮುಂದೆ "ಮಹಾನ್ (ಗ್ರೇಟ್)" ಎಂದು ಉಲ್ಲೇಖಿಸಬಾರದು ಎಂಬ ನಿರ್ಧಾರವೂ ಸೇರಿದೆ.

ಇತಿಹಾಸವನ್ನು ವಿದ್ಯಾರ್ಥಿಗಳಿಗೆ ಪ್ರಸ್ತುತಪಡಿಸುವ ವಿಧಾನದಲ್ಲಿನ ಸಕಾರಾತ್ಮಕ ಬದಲಾವಣೆಯನ್ನು ಈ ನವೀಕರಣಗಳು ಪ್ರತಿಬಿಂಬಿಸುತ್ತದೆ. ಎಸ್‌ಜಿಆರ್ ಜ್ಞಾನ ಪ್ರತಿಷ್ಠಾನ ಆಯೋಜಿಸಿದ್ದ ಆರೆಂಜ್ ಸಿಟಿ ಸಾಹಿತ್ಯ ಉತ್ಸವದಲ್ಲಿ ಮಾತನಾಡಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನಿಲ್ ಅಂಬೇಕರ್ "ಪಠ್ಯಗಳ ಪರಿಭಾಷೆ ಬದಲಾಗಿದ್ದರೂ, ಯಾರನ್ನೂ ಪುಸ್ತಕಗಳಿಂದ ತೆಗೆದುಹಾಕಲಾಗಿಲ್ಲ, ಏಕೆಂದರೆ ಯುವ ಪೀಳಿಗೆ ಹಿಂದಿನ ಕ್ರಮಗಳು ಮತ್ತು ಕ್ರೂರ ಕೃತ್ಯಗಳ ಬಗ್ಗೆ ತಿಳಿದಿರಬೇಕು"ಎಂದು ಹೇಳಿದರು. ಎನ್‌ಸಿಇಆರ್‌ಟಿ 15 ತರಗತಿಗಳಲ್ಲಿ 11 ತರಗತಿಗಳಿಗೆ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿದೆ, ಬದಲಾವಣೆಗಳನ್ನು ಬಹಳ ಉತ್ತಮ ಉಪಕ್ರಮ ಎಂದು ಬಣ್ಣಿಸಿದ್ದಾರೆ. ಮುಂದಿನ ವರ್ಷ 9, 10 ಮತ್ತು 12 ನೇ ತರಗತಿಗಳಿಗೆ ಹೊಸ ಆವೃತ್ತಿಗಳನ್ನು ಪರಿಚಯಿಸಲಾಗುವುದು ಎಂದು ಅವರು ಹೇಳಿದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.